# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಆಗಸ್ಟ್ 23, 2021

ಸಂಪುಟ : 48  ಸಂಚಿಕೆ : 101  ☎ 254736  91642 99999  RNI No: 27369/75  KA/SK/CTA-275/2021-2023. O/P @ J.D. Circle P.O.  ಪುಟ : 4  ರೂ : 4.00  www.janathavani.com  janathavani@mac.com




**ರಕ್ಷಾ ಬಂಧನ** ಉತ್ತರ ಪ್ರದೇಶ ರಾಜ್ಯದ ಪ್ರಯಾಗರಾಜ್ ನಲ್ಲಿ ರಕ್ಷಾ ಬಂಧನ ಹಬ್ಬದ ವೇಳೆ ಬಾಲಕಿಯೊಬ್ಬಳು ತನ್ನ ಅಣ್ಣನಿಗೆ ರಾಖಿ ಕಟ್ಟುವ ಮುನ್ನ ಹಣೆಗೆ ತಿಲಕ ಇಡುತ್ತಿರುವುದು.

## ತಾಲಿಬಾನ್ ಪರ ಚೀನಾ-ಪಾಕ್

### ದೀರ್ಘಾವಧಿಯಲ್ಲಿ ಉಭಯ ದೇಶಗಳಿಗೆ ಸಮಸ್ಯೆಯಾಗುವ ಸಾಧ್ಯತೆ

ಬೀಜಿಂಗ್, ಆ. 22- ಆಫ್ಘಾನಿಸ್ತಾನ ವಶಪಡಿಸಿಕೊಂಡಿರುವ ತಾಲಿಬಾನಿಗಳಿಗೆ ಮಾನ್ಯತೆ ನೀಡಲು ಚೀನಾ ಹಾಗೂ ಪಾಕಿಸ್ತಾನ ಜಂಟಿಯಾಗಿ ಪ್ರಯತ್ನನಡೆಸುತ್ತಿವೆ. ಆದರೆ, ಈ ಕ್ರಮ ದೀರ್ಘಾವಧಿ ಹಾನಿಗೆ ಹಾಗೂ ಅಮೆರಿಕದ ವಿರೋಧಕ್ಕೆ ಕಾರಣ ವಾಗಬಹುದು ಎಂದು ಪರಿಣಿತರು ಹೇಳಿದ್ದಾರೆ.

ತಾಲಿಬಾನ್ ಕಾಬುಲ್ ಅನ್ನು ವಶಪಡಿಸಿಕೊಂಡ ನಂತರ ಚೀನಾ ಹಾಗೂ ಪಾಕಿಸ್ತಾನಗಳು ಅಮೆರಿಕದ ಆಫ್ಘಾನ್ ಸೋಲಿನಿಂದ ಉತ್ಸಾಹಗೊಂಡಿವೆ. ಅಲ್ ಕೈದಾ ಹಾಗೂ ಇಸ್ಲಾಮಿಕ್ ಸ್ಟೇಟ್ ಉಗ್ರವಾದದ ಹಿನ್ನೆಲೆ ಹೊಂದಿರುವ ತಾಲಿಬಾನಿಗಳಿಗೆ ಬೆಂಬಲ ದೊರಕಿಸುವ ಪ್ರಯತ್ನದಲ್ಲಿ ತೊಡಗಿವೆ.

ಆಫ್ಘಾನಿಸ್ತಾನದಲ್ಲಿ ತಟಸ್ಥವಾಗಿರುವುದಾಗಿ ಹೇಳುತ್ತಿದ್ದ ಪಾಕಿಸ್ತಾನ ಸರ್ಕಾರ, ಈಗ ಸ್ಪಷ್ಟವಾಗಿ ತಾಲಿಬಾನ್ ಪರ ನಿಂತಿದೆ. ಈ ಬಗ್ಗೆ ಅಲ್ಲಿನ ವಿಶ್ಲೇಷಕರು ತಿಳಿಸುತ್ತಿದ್ದಾರೆ ಎಂದು ದಕ್ಷಿಣ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.

ಕಾಬುಲ್ ಪತನದ ಕೆಲವೇ ಗಂಟೆಗಳ ನಂತರ ಹೇಳಿಕೆ ನೀಡಿದ್ದ ಪಾಕ್ ಪ್ರಧಾನಿ ಇಮ್ರಾನ್ ಖಾನ್, ಪಾಶ್ಚಾತ್ಯ ದಾಸ್ಯದ ಸಂಕೋಲೆಗಳನ್ನು ಆಫ್ಘಾನ್ ಜನರು ಕಿತ್ತೆಸೆದಿದ್ದಾರೆ ಎಂದಿದ್ದರು.

ತಾಲಿಬಾನಿಗಳಿಗೆ ರಾಯಭಾರಿ ಬೆಂಬಲ ಒದಗಿಸಲು ಚೀನಾ ಹಾಗೂ ರಷ್ಯಾದ ಜೊತೆಗೂಡಿ ಪಾಕಿಸ್ತಾನ ಪ್ರಯತ್ನ ನಡೆಸುತ್ತಿದೆ. ತಾಲಿಬಾನಿಗಳು ಎಲ್ಲರನ್ನೂ ಒಳಗೊಂಡ ಆಡಳಿತ ನಡೆಸಲಿದ್ದಾರೆ, ಆಫ್ಘಾನಿಸ್ತಾನದಿಂದ ಉಗ್ರವಾದಿ ದಾಳಿ ತಡೆಯಲಿದ್ದಾರೆ ಹಾಗೂ ಮಹಿಳೆಯರಿಗೆ ಶಿಕ್ಷಣ



ಹಾಗೂ ಉದ್ಯೋಗ ಕೊಡಲಿದ್ದಾರೆ ಎಂದು ಪಾಕಿಸ್ತಾನ ಪ್ರತಿಪಾದಿಸುತ್ತಿದೆ ಎಂದು ಪೋಸ್ಟ್ ವರದಿ ಹೇಳಿದೆ.

ತಾಲಿಬಾನ್‌ಗೆ ಬೆಂಬಲ ನೀಡುವ ಮೂಕ ಆಫ್ಘಾನಿಸ್ತಾನದಿಂದ ಭಾರತವನ್ನೂ ದೂರವಿಡಲು ಪಾಕಿಸ್ತಾನ ಬಯಸಿದೆ. ಪಾಕಿಸ್ತಾನದ ಜೊತೆ ಕೈ ಜೋಡಿಸಿ ಅಮೆರಿಕವನ್ನು ಆಫ್ಘಾನಿಸ್ತಾನದಿಂದ ದೂರವಿಡಲು ತಾಲಿಬಾನಿಗಳು ಬಯಸುತ್ತಿದ್ದಾರೆ ಎಂದು ಸಿಂಗಪುರದ ಆರ್.ಎಸ್.ಐ.ಎಸ್. ಅಂತರರಾಷ್ಟ್ರೀಯ ಅಧ್ಯಯನ ಶಾಲೆಯ ಸಂಶೋಧಕ ಅಬ್ದುಲ್ ಬಾಸಿತ್ ಹೇಳಿದ್ದಾರೆ.

ಈ ನಡುವೆ, ಪಾಕಿಸ್ತಾನ ಹಾಗೂ ಅಮೆರಿಕದ ನಡುವಿನ ಸಂಬಂಧಗಳು ಹದಗೆಟ್ಟಿವೆ. ತಾಲಿಬಾನ್ ಮೇಲೆ ಒತ್ತಡ ಹೇರಬೇಕು ಹಾಗೂ ಉಗ್ರವಾದ ವಿರೋಧಿ ಕ್ರಮ ತೆಗೆದುಕೊಳ್ಳಬೇಕು ಎಂದು ಅಮೆರಿಕ ಬಯಸುತ್ತಿದೆ ಎಂದು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ವಿಶ್ಲೇಷಕ ಅಸಂದ್ಯಾರ್ ಮೀರ್ ಹೇಳಿದ್ದಾರೆ.

ತಾಲಿಬಾನ್ ಜವಾಬ್ದಾರಿಯುತವಾಗಿ ಹಾಗೂ ಸಮತೋಲನದ ಸರ್ಕಾರ ನಡೆಸಿದರೆ ಅಮೆರಿಕ ಹಾಗೂ ಪಾಕಿಸ್ತಾನದ ಸಂಬಂಧಗಳು ಈಗಿರುವಂತೆಯೇ ಮುಂದುವರೆಯಲಿವೆ. ಆಫ್ಘಾನ್ ಪರಿಸ್ಥಿತಿ ಬಿಗಡಾಯಿಸಿದರೆ ಉಭಯ ದೇಶಗಳ ಸಂಬಂಧ ಇನ್ನಷ್ಟು ಕುಸಿಯಬಹುದು ಎಂದವರು ಹೇಳಿದ್ದಾರೆ.

ಆಫ್ಘಾನಿಸ್ತಾನದಲ್ಲಿ ಅಮೆರಿಕದ ಸೋಲನ್ನು ಚೀನಾದ ಅಧಿಕೃತ ಮಾಧ್ಯಮಗಳು ನಿರಂತರವಾಗಿ ಲೇವಡಿ ಮಾಡುತ್ತಿವೆ. ಅಮೆರಿಕದ ಸೋಲು ಚೀನಾಗೆ ಪ್ರಚಾರ ನಡೆಸುವ ದೊಡ್ಡ ಅಸ್ತ್ರ ನೀಡಿದೆ.


ಆದರೆ, ಅಮೆರಿಕದ ಪಡೆಗಳು ಹಿಂದೆ ಸರಿದಿರುವುದು ಆಫ್ಘಾನ್ ವಲಯದಲ್ಲಿ ಅಸ್ಥಿರತೆ ತಂದಿದೆ. ಮತ್ತೊಂದೆಡೆ ಅಮೆರಿಕ, ಚೀನಾ ಸೇರಿದಂತೆ ಬೇರೆ ವಿಷಯಗಳತ್ತ ಗಮನ ಹರಿಸಲು ಅವಕಾಶ ಕೊಟ್ಟಿದೆ ಎಂದು ಪೋಸ್ಟ್‌ನ ಮಾಜಿ ಸಂಪಾದಕ ವಾಂಗ್ ಕ್ಸಿಯಾಂಗ್ವಿ ಹೇಳಿದ್ದಾರೆ.

ಅಲ್ಲದೇ ಆಫ್ಘಾನಿಸ್ತಾನ ಮತ್ತೆ ಉಗ್ರವಾದಿಗಳ ನೆಲೆಯಾಗುವ ಸಾಧ್ಯತೆ ಇದೆ. ಚೀನಾದ ಕ್ಸಿಂಜಿಯಾಂಗ್ ಪ್ರಾಂತ್ಯದ ಉಗ್ರವಾದಿ ದಾಳಿಗಳಿಗೆ ಕಾರಣ ಎಂದು ಹೇಳಲಾಗುವ ಯೂಗರ್ ಉಗ್ರರು ಮತ್ತೆ ಆಫ್ಘಾನ್‌ನಲ್ಲಿ ತಲೆ ಎತ್ತುವ ಕಳವಳ ಇದೆ.

ವಿದೇಶಿ ಹೋರಾಟಗಾರರು ಆಫ್ಘಾನಿಸ್ತಾನಕ್ಕೆ ಬರಲು ಬಿಡುವುದಿಲ್ಲ ಎಂದು ತಾಲಿಬಾನ್ ಸಹ ಸ್ಥಾಪಕ ಮುಲ್ಲಾ ಅಬ್ದುಲ್ ಘನಿ (2ನೇ ಪುಟಕ್ಕೆ)

## ದೇಶಾದ್ಯಂತ ಇಂದು ಬೆಳ್ಳಿ-ಬಂಗಾರದ ಅಂಗಡಿಗಳ ಬಂದ್‌ಗೆ ಕರೆ

ದಾವಣಗೆರೆ, ಆ.22- ಕೇಂದ್ರ ಸರ್ಕಾರವು ಒಡವೆಗಳ ಮೇಲೆ ಹೆಚ್.ಯು.ಐ.ಡಿ. ಕಡ್ಡಾಯ ಮಾಡಿರುವುದನ್ನು ವಿರೋಧಿಸಿ ನಾಳೆ ದಿನಾಂಕ 23ರ



ಸೋಮವಾರ ಜಿಲ್ಲೆಯ ಎಲ್ಲಾ ಚಿನ್ನ, ಬೆಳ್ಳಿ ವರ್ತಕರು ಅಂಗಡಿಗಳನ್ನು ಬಂದ್ ಮಾಡಲಾಗುವುದು ಎಂದು ದಿ ದಾವಣಗೆರೆ ಜ್ಯುಯಲರ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಆರ್.ಡಿ. ಬದ್ರಿನಾಥ್ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಹಕರು ಆಭರಣಗಳನ್ನು ಕೊಳ್ಳುವಾಗ ಶುದ್ಧತೆಯ ಬಗ್ಗೆ ತಿಳಿಸಲು ಹಾಲ್ ಮಾರ್ಕ್ ಕಡ್ಡಾಯಗೊಳಿಸಿರುವುದನ್ನು ಸ್ವಾಗತಿಸುತ್ತೇವೆ. ಆದರೆ ಇದೀಗ ಹೆಚ್.ಯು.ಐ.ಡಿ. (hallmark unique identification discription) ಕಡ್ಡಾಯ ಮಾಡಿರುವುದರಿಂದ ವರ್ತಕರಿಗೆ ಸಾಕಷ್ಟು ತೊಂದರೆಯಾಗುತ್ತದೆ ಎಂದು ಹೇಳಿದರು. ಹೆಚ್.ಯು.ಐ.ಡಿ. ಮಾರ್ಕ್‌ಗೆ (3ನೇ ಪುಟಕ್ಕೆ)

## ಮರವೇ ದುರಾಸೆಯದಾದರೆ ಫಲವೂ ದುರಾಸೆಯಿಂದಾಗಿರುತ್ತೆ



ದಾವಣಗೆರೆ, ಆ.22- ಕೆಪಿಎಸ್‌ಸಿ ಸ್ವಚ್ಛಗೊಳಿಸಿ - ಉದ್ಯೋಗಾಕಾಂಕ್ಷಿಗಳಿಗೆ ನ್ಯಾಯ ಒದಗಿಸಿ ವಿಷಯದ ಕುರಿತು ಇಂದು ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ), ಅಖಿಲ ಭಾರತ ನಿರುದ್ಯೋಗಿ ಯುವಜನ ಹೋರಾಟ ಸಮಿತಿ (ಎಐಯುವೈಎಸ್‌ಸಿ) ಸಂಯುಕ್ತಾಶ್ರಯದಲ್ಲಿ ವೆಬಿನಾರ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಮತ್ತು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಮಾತನಾಡಿ, ಇಂದು ಅಧಿಕಾರದಲ್ಲಿರುವವರಿಗೆ ತಪ್ಪು ಮಾಡುವುದೇನೂ ತಪ್ಪಲ್ಲ ಎಂಬ ಭಾವನೆಯಿದೆ. ಅವರಲ್ಲಿನ ಸ್ವಾರ್ಥ ಮತ್ತು ದುರಾಸೆಗಳಿಂದಾಗಿ ಭ್ರಷ್ಟಾಚಾರ ಲಂಚಗುಳಿತನ ಈ ಹಂತ ಮುಟ್ಟಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈಗಿನ ಕೆಪಿಎಸ್‌ಸಿ ಅಧ್ಯಕ್ಷರ (3ನೇ ಪುಟಕ್ಕೆ)




**ಮಳೆ..ಮಳೆ..**

ದಾವಣಗೆರೆಯಲ್ಲಿ ಹಲವು ದಿನಗಳಿಂದ ಬಿಡುವು ನೀಡಿದ್ದ ಮಳೆ ಭಾನುವಾರ ಸಂಜೆ ಹಲವು ತಾಸುಗಳ ಕಾಲ ಧೋ ಎಂದು ಸುರಿಯಿತು. ಖರೀದಿ ಮತ್ತಿತರೆ ಕಾರಣಗಳಿಗೆ ಮನೆಯಿಂದ ಹೊರ ಬಂದ ಜನತೆ ಮನೆಗಳಿಗೆ ತೆರಳಲು ತಾಸು ಗಟ್ಟಲೆ ಕಾಯಬೇಕಾಯಿತು.

## ಮೊದಲು ಶಾಲೆಗೆ ಬನ್ನಿ, ಕಲಿಕೆ ನಂತರದ್ದು

ಸಾಣೇಹಳ್ಳಿ, ಆ.22- ಮೊದಲು ಶಾಲೆಗೆ ಬನ್ನಿ, ಕಲಿಕೆ ನಂತರದ್ದು. ಪರೀಕ್ಷೆ, ಫಲಿತಾಂಶದ ಬಗ್ಗೆ ಚಿಂತಿಸದೆ ಕಲಿಕೆಯ ಕಡೆ ಮಾತ್ರ ಗಮನಹರಿಸಿ ಎಂದು ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಕ್ಕಳಿಗೆ ಕಿವಿ ಮಾತು ಹೇಳಿದರು.



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಚಿತ್ರದುರ್ಗ ಹಾಗೂ ಸ್ಥಳೀಯ ಸಂಸ್ಥೆ ಹೊಸದುರ್ಗ ಇವರು ಅಂತರ್ಜಾಲಾಧಾರಿತ ಗೂಗಲ್ ಮೀಟ್‌ನಲ್ಲಿ ಆಯೋಜಿಸಿದ್ದ 'ಶಾಲಾ ಪ್ರಾರಂಭೋತ್ಸವದ ಹಿನ್ನೆಲೆಯಲ್ಲಿ ಪೋಷಕರು, ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಿದ್ಯಾರ್ಥಿಗಳು ಹೆದರುವ ಅಗತ್ಯವಿಲ್ಲ. ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಂಡರೆ ಸಾಕು. ಸರ್ಕಾರ, ಶಿಕ್ಷಣ ಇಲಾಖೆ, ಪಂಚಾಯತಿ, ಶಿಕ್ಷಕರು, ಆಡಳಿತ ಮಂಡಳಿಗಳು ಒಟ್ಟಾರೆ ಇಡೀ ಆಡಳಿತ ಯಂತ್ರ ನಿಮ್ಮ ಹಿಂದೆ ಇದೆ. ಸೋಂಕಿನ ಲಕ್ಷಣಗಳು ಕಂಡು ಬಂದರೆ ಉದಾಸೀನ, ಮುಚ್ಚುಮರೆ ಮಾಡದೆ ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಳ್ಳ ಬೇಕು ಎಂದು ಹೇಳಿದರು.

ಶಾಲೆಗಳಲ್ಲಿ ಮುನ್ನೆಚ್ಚರಿಕೆ ತೆಗೆದುಕೊಳ್ಳುವಂತೆ ಮನೆಯಲ್ಲೂ ತೆಗೆದುಕೊಳ್ಳಬೇಕು. ಇದೇ ದುರ್ದಿನಗಳು ಮುಂದೆಯೂ ಇರುವುದಿಲ್ಲ. ಮಕ್ಕಳಿಗೆ ಶಿಕ್ಷಣ ಅತ್ಯಗತ್ಯವಾಗಿ ಬೇಕು. ಇಲ್ಲದಿದ್ದರೆ ಇದೇ ಮಕ್ಕಳ ಭವಿಷ್ಯಕ್ಕೆ ಮುಳುವಾಗಬಹುದು. ಮನೆಯ ಸದಸ್ಯರೂ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಹೇಳಿದರು.

ಶಿಕ್ಷಕರೂ ಸಹ ತಮ್ಮಲ್ಲಿ ಆತ್ಮವಿಶ್ವಾಸ ಬೆಳೆಸಿಕೊಂಡು, ಮಕ್ಕಳಲ್ಲಿಯೂ ಆತ್ಮವಿಶ್ವಾಸ ತುಂಬಬೇಕು. ನೇರ ಪಾಠಗಳಿಗೆ ಹೋಗದೆ ಮಕ್ಕಳ ಬೌದ್ಧಿಕ ಮಟ್ಟಕ್ಕೆ ಅನುಗುಣವಾಗಿ ಬೇಸಿಕ್ ಅಂಶಗಳನ್ನು ಕಲಿಸಿ ನಂತರ ಪಾಠಗಳತ್ತ ಮುಂದುವರೆಯಬೇಕು. ಮಕ್ಕಳಿಗೆ ಹೋಮ್ ವರ್ಕ್, ಪ್ರಾಜೆಕ್ಟ್ ವರ್ಕ್ ಎಂದು ಹೊರೆ ಮಾಡಬಾರದು. ಕಲಿಕೆಗೆ ಹೊಂದಿಕೊಳ್ಳಲು ಮಕ್ಕಳಿಗೆ ಸಮಯ ಹಿಡಿಯುತ್ತದೆ ಎನ್ನುವುದನ್ನು ಅರಿತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಆನ್ ಲೈನ್‌ಗಿಂತ ಔಪಚಾರಿಕ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾದುದು. ಸರ್ಕಾರ ಪೋಷಕರನ್ನು, ವಿದ್ಯಾರ್ಥಿಗಳನ್ನು, ಅಧ್ಯಾಪಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಶಾಲೆಗಳಿಗೆ ಮೂಲಭೂತ ಸೌಲಭ್ಯಗಳಾದ ಸ್ವಚ್ಛತೆ, ಕಟ್ಟಡ ದುರಸ್ತಿ, ಶಿಕ್ಷಕರ ನೇಮಕಾತಿ, ಪಠ್ಯಪುಸ್ತಕಗಳು, ಕುಡಿಯುವ ನೀರು, ಕಾಂಪೌಂಡ್ ಇತ್ಯಾದಿಗಳನ್ನು ಒದಗಿಸುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ವಿದ್ಯಾರ್ಥಿ ನಿಲಯಗಳ ಆರಂಭಕ್ಕೂ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಗೌರವ ಉಪಸ್ಥಿತಿ ಹೊಂದಿದ್ದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ (3ನೇ ಪುಟಕ್ಕೆ)

## ಐ.ಟಿ. ಪೋರ್ಟಲ್ ತೊಡಕು: ಇನ್ಫೋಸಿಸ್ ಅಧಿಕಾರಿ ಹಾಜರಾಗಲು ಕೇಂದ್ರ ಸೂಚನೆ

ನವದೆಹಲಿ, ಆ. 22- ಸತತ ಎರಡು ದಿನಗಳಿಂದ ಆದಾಯ ತೆರಿಗೆ ಪೋರ್ಟಲ್ ಕಾರ್ಯನಿರ್ವಹಿಸದ ಹಿನ್ನೆಲೆಯಲ್ಲಿ ಈ ಪೋರ್ಟಲ್ ರೂಪಿಸಿರುವ ಇನ್ಫೋಸಿಸ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಸಲೀಲ್ ಪರೇಖ್ ಅವರು ಹಾಜರಾಗುವಂತೆ ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಎರಡು ತಿಂಗಳ ಹಿಂದೆ ಆರಂಭವಾದ ಪೋರ್ಟಲ್ ಇನ್ನೂ ತೊಡಕುಗಳನ್ನು ಎದುರಿಸುತ್ತಿರುವ ಬಗ್ಗೆ ಸೋಮವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ವಿವರಣೆ ನೀಡುವಂತೆ ತಿಳಿಸಲಾಗಿದೆ.

www.incometax.gov.in ವೆಬ್ ತಾಣವನ್ನು ಇನ್ಫೋಸಿಸ್ ರೂಪಿಸಿತ್ತು. ಜೂನ್ 7ರಂದು ಆರಂಭವಾದ ನಂತರದಿಂದ ಪೋರ್ಟಲ್ ಸಮಸ್ಯೆಗಳನ್ನು ಎದುರಿಸುತ್ತಲೇ ಇದೆ. ವೆಬ್ ತಾಣದಲ್ಲಿ ಕೆಲ ಆಯ್ಕೆಗಳು ಲಭ್ಯವಾಗುತ್ತಿಲ್ಲ. ಇನ್ನು ಕೆಲ ಆಯ್ಕೆಗಳು ನಿಧಾನವಾಗಿ (2ನೇ ಪುಟಕ್ಕೆ)

## ಶ್ರೀಲಂಕಾಗೆ ಭಾರತದಿಂದ ಆಕ್ಸಿಜನ್ ಪೂರೈಕೆ

ಕೊಲಂಬೊ, ಆ. 22 – ಕೊರೊನಾದಿಂದ ತತ್ತರಿಸಿರುವ ಶ್ರೀಲಂಕಾಗೆ ಭಾರತ 100 ಟನ್‌ಗಳ ದ್ರವ ವೈದ್ಯಕೀಯ ಆಕ್ಸಿಜನ್ ಪೂರೈಕೆ ಮಾಡಿದೆ.

ನೌಕಾ ದಳದ ಹಡಗಾದ ಶಕ್ತಿ ಮೂಲಕ ಆಕ್ಸಿಜನ್ ಅನ್ನು ರವಾನಿಸಲಾಗಿದೆ. ಆಕ್ಸಿಜನ್ ತಲುಪಿದ ಸಂದರ್ಭದಲ್ಲಿ ಬಂದರಿನಲ್ಲಿದ್ದ ಶ್ರೀಲಂಕಾ ಸಚಿವ ರೋಹಿತ್ ಅಬೆಯ್ ಗುಣವರ್ದನೆ, ಭಾರತದ ನೆರವಿಗೆ ಪ್ರಶಂಸಿಸಿದ್ದಾರೆ.

ಶ್ರೀಲಂಕಾ ಅಧ್ಯಕ್ಷ ಜಿ. (2ನೇ ಪುಟಕ್ಕೆ)

## ಬಿಜೆಪಿಯಿಂದ ಮನೆ ಬಾಗಿಲಿಗೆ ನಾಮ ಫಲಕ



ದಾವಣಗೆರೆ, ಆ. 22- ಬಿಜೆಪಿ ಕೇಂದ್ರ ಕಛೇರಿ ವತಿಯಿಂದ ದೇಶದಲ್ಲಿನ ಪ್ರತಿಯೊಂದು ಬೂತ್ ಮಟ್ಟದ ಅಧ್ಯಕ್ಷರಿಗೆ ಗೌರವ ಸಮರ್ಪಿತವಾಗಿ ಮನೆ ಬಾಗಿಲಿಗೆ ನಾಮ ಫಲಕವನ್ನು ಕಳಿಸಲಾಗಿದ್ದು, ಭಾನುವಾರ ಪಕ್ಷದ ಪ್ರತಿಯೊಬ್ಬ ಅಧ್ಯಕ್ಷರ ಮನೆ ಬಾಗಿಲಿಗೆ ನಾಮ ಫಲಕ ಅಂಟಿಸಿ, ಭಾರತ ಮಾತೆಯ ಪೂಜೆ ಮಾಡಲಾಯಿತು.

ಶಾಸಕ ಎಸ್.ಎ ರವೀಂದ್ರನಾಥ್ ಅವರು ಮಹಾನಗರ ಪಾಲಿಕೆಯ 24ನೇ ವಾರ್ಡಿನ ಬೂತ್ ಅಧ್ಯಕ್ಷ ಸಿದ್ದು ಅಕ್ಕಿ ಅವರ ಮನೆಗೆ ನಾಮ ಫಲಕ ಹಚ್ಚಿ ಚಾಲನೆ ನೀಡಿದರು. 24 ನೇ ವಾರ್ಡಿನ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಹನುಮಂತಪ್ಪ, ಪದ್ಮನಾಭ ಶೆಟ್ರು, ನಳಿನಿ ಪವಾರ್, ಕಿರಣ್, ಶೇಖರ್ ಉಪ್ಪಿನ್, ರೇಣುಕಾ ಪ್ರಸನ್ನ, ಅನಿಲ್, ವಿವೇಕ್, ಸೋಹನ್, ಇತರೆ ವಾರ್ಡ್ ಮುಖಂಡರು ಉಪಸ್ಥಿತರಿದ್ದರು.

## ಪೆಟ್ರೋಲ್, ಡೀಸೆಲ್ ಬೆಲೆ 20 ಪೈಸೆ ಇಳಿಕೆ

ನವದೆಹಲಿ ಆ. 22 – ಭಾನುವಾರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 20 ಪೈಸೆ ಇಳಿಕೆ ಮಾಡಲಾಗಿದೆ. ತಿಂಗಳ ನಂತರ ಮೊದಲ ಬಾರಿಗೆ ಪೆಟ್ರೋಲ್ ಬೆಲೆ ಇಳಿಕೆಯಾಗಿದೆ. ಡೀಸೆಲ್ ಬೆಲೆ ಕಳೆದ ಒಂದು ವಾರದಲ್ಲಿ 4 ಬಾರಿ ಇಳಿಕೆಯಾಗಿದೆ.

ಮೇ ತಿಂಗಳ ನಂತರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಅತಿ ಕಡಿಮೆ ಹಂತಕ್ಕೆ ಬಂದಿದೆ. ಇದರಿಂದಾಗಿ ಆಗಸ್ಟ್ 18ರ ನಂತರ ನಾಲ್ಕು ಬಾರಿ ಡೀಸೆಲ್ ಬೆಲೆ ಇಳಿಕೆಯಾಗಿದೆ. ಪ್ರತಿ ಬಾರಿಯೂ ಲೀಟರ್‌ಗೆ 20 ಪೈಸೆಯಷ್ಟು (3ನೇ ಪುಟಕ್ಕೆ)

## ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲು ಪಕ್ಷದ ಕಾರ್ಯಕರ್ತರಿಗೆ ಕರೆ

ಜಗಳೂರು, ಆ.22- ಬೂತ್ ಮಟ್ಟದ ಅಧ್ಯಕ್ಷರುಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿ, ನಮ್ಮ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಸುವಂತೆ ಶಾಸಕ ಎಸ್.ವಿ.ರಾಮಚಂದ್ರ ಕರೆ ನೀಡಿದರು.



ಪಟ್ಟಣದ ರಾಮಾಲಯ ರಸ್ತೆಯ 5ನೇ ವಾರ್ಡ್‌ನ ಬೂತ್ ಅಧ್ಯಕ್ಷ ಶಿವಕುಮಾರ್ ಅವರ ಮನೆಗೆ ನಾಮಫಲಕ ಅಳವಡಿಸುವ ಮೂಲಕ ಕಾರ್ಯಕ್ರಮ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಬೂತ್ ಮಟ್ಟದ ಅಧ್ಯಕ್ಷರ ಮನೆ ಮೇಲೆ ಬಿಜೆಪಿ ಬಾವುಟ ಹಾರಿಸುವ ಮೂಲಕ ನಾಮ ಫಲಕ ಅಳವಡಿಸಿ ಪಕ್ಷ ಸಂಘಟನೆಗೆ ಒತ್ತು ನೀಡಲಾಗುವುದು ಎಂದರು.

ಪಟ್ಟಣದ 18 ವಾರ್ಡ್ ಸೇರಿದಂತೆ ತಾಲ್ಲೂಕಿನ 22 ಗ್ರಾಮ ಪಂಚಾಯಿತಿ ಹಾಗೂ ಜಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ನಮ್ಮ ಪಕ್ಷದ ಆದೇಶದಂತೆ 260 ಬೂತ್ ಮಟ್ಟದ ಅಧ್ಯಕ್ಷರುಗಳ ಮನೆಗೆ ಹಾಗೂ ನಗರ ಪ್ರದೇಶದ (2ನೇ ಪುಟಕ್ಕೆ)

## 19 ಪಾಸಿಟಿವ್ 14 ಗುಣಮುಖ

ದಾವಣಗೆರೆ, ಆ.22- ಜಿಲ್ಲೆಯಲ್ಲಿ ಭಾನುವಾರ 19 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ. 14 ಜನ ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 9, ಹರಿಹರ 1, ಚನ್ನಗಿರಿ 5, ಹೊನ್ನಾಳಿ 3 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 214ಸಕ್ರಿಯ ಪ್ರಕರಣಗಳಿವೆ.

## ಆಫ್ಘಾನ್‌ನಿಂದ 392 ಜನ ಭಾರತಕ್ಕೆ ವಾಪಾಸ್

ನವದೆಹಲಿ ಆ. 22 – ಆಫ್ಘಾನಿಸ್ಥಾನದಿಂದ ಭಾರತಕ್ಕೆ ಭಾನುವಾರ 392 ಜನರನ್ನು ವಾಪಸ್ ಕರೆ ತರಲಾಗಿದೆ. ಇವರಲ್ಲಿ ಆಫ್ಘಾನಿಸ್ತಾನದ ಇಬ್ಬರು ಶಾಸಕರೂ ಸೇರಿದ್ದಾರೆ.

ತಾಲಿಬಾನ್ ವಿರೋಧ ಹೆಚ್ಚಾಗುತ್ತಿರುವ ಹಾಗೂ ಭದ್ರತಾ ಪರಿಸ್ಥಿತಿ ಕಾಬುಲ್‌ನಲ್ಲಿ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಮೂರು ಬೇರೆ ಬೇರೆ ಮಾರ್ಗಗಳ ಮೂಲಕ ಜನರನ್ನು ಕರೆ ತರಲಾಗಿದೆ.

ಇದುವರೆಗೂ ಆಫ್ಘಾನಿಸ್ತಾನದಿಂದ 590 ಜನರನ್ನು ವಾಪಸ್ ಕರೆಸಲಾಗಿದೆ.

ಅಮೆರಿಕ ಹಾಗೂ ಇತರೆ ದೇಶಗಳ ಸಹಕಾರದೊಂದಿಗೆ ಜನರನ್ನು ತೆರವುಗೊಳಿಸಲಾಗುತ್ತಿದೆ.

## ಭಾನುವಾರ ದೇಶದಲ್ಲಿ 31 ಸಾವಿರದಷ್ಟು ಸೋಂಕಿತರು

ನವದೆಹಲಿ, ಆ. 22 – ದೇಶದಲ್ಲಿ ಭಾನುವಾರ 30,948 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ ಸೋಂಕಿನಿಂದ 403 ಜನ ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸಕ್ರಿಯ ಸೋಂಕಿತರ ಸಂಖ್ಯೆ 3.54 ಲಕ್ಷಕ್ಕೆ ಇಳಿಕೆಯಾಗಿದೆ. ಇದು 152 ದಿನಗಳಲ್ಲೇ ಅತಿ ಕಡಿಮೆ. ಸಕ್ರಿಯ ಸೋಂಕಿತರ ಸಂಖ್ಯೆ ಭಾನುವಾರ 7,942 ಕಡಿಮೆಯಾಗಿದೆ.

ಶನಿವಾರ 15.84 ಲಕ್ಷ ಕೊರೊನಾ ಟೆಸ್ಟ್ ನಡೆಸಲಾಗಿದ್ದು, ಪಾಸಿಟಿವ್ ಪ್ರಮಾಣ ಶೇ.1.95ರಷ್ಟಿದೆ. ವಾರದ ಪಾಸಿಟಿವ್ ದರ ಶೇ.2ರಷ್ಟಿದೆ.


## 10ನೇ ವರ್ಷದ ಪುಣ್ಯಸ್ಮರಣೆ



**ಶರಣ ಕೆ.ಆರ್.ರಮೇಶ್**
ನಿಧನ : 23.08.2011

ನೀನು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
ಶ್ರೀಮತಿ ಕೆ.ಜಿ. ಗಿರಿಜಮ್ಮ ಮತ್ತು ಶ್ರೀ ಕೆ.ಜಿ.ರೇವಣಸಿದ್ದಪ್ಪ
1ನೇ ದರ್ಜೆ ಗುತ್ತಿಗೆದಾರರು ಹಾಗೂ
ಮಾಜಿ ಪ್ರಧಾನರು, ಕುರ್ಕಿ, ದಾವಣಗೆರೆ ತಾಲ್ಲೂಕು.
ಪತ್ನಿ : ಶ್ರೀಮತಿ ಸವಿತಾ ರಮೇಶ್ ಕೆ.ಆರ್.
ಕು।। ಅನುಷಾ, ಎಂಬಿಬಿಎಸ್, ಕು।। ಅಮೂಲ್ಯ
ಸಹೋದರಿಯರು ಹಾಗೂ ಮಾವಂದಿರು
ಬಂಧು-ಮಿತ್ರರು, ಕುರ್ಕಿ.
ಜಿ.ಆರ್. ಸರ್ವೀಸ್ ಸ್ಟೇಷನ್, ತೋಳಹುಣಸೆ.
ಜ್ಯೋತಿ ಸರ್ವೀಸ್ ಸ್ಟೇಷನ್, ಅಣಜಿ.

# ಕಾಂಗ್ರೆಸ್‌ನಲ್ಲಿ ಕೆಲಸ ಜಾಸ್ತಿ, ಬಿಜೆಪಿಯಲ್ಲಿ ಪ್ರಚಾರ ಜಾಸ್ತಿ

## ಹರಪನಹಳ್ಳಿ : ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶಿವಯೋಗಿ



ಹರಪನಹಳ್ಳಿ, ಆ.22- ಕಾಂಗ್ರೆಸ್ ಪಕ್ಷದಲ್ಲಿ ಪ್ರಚಾರಕಡಿಮೆ ಕೆಲಸ ಜಾಸ್ತಿ ಆದರೆ ಬಿಜೆಪಿಯಲ್ಲಿ ಕೆಲಸ ಕಡಿಮೆ ಪ್ರಚಾರ ಜಾಸ್ತಿ ಎಂದು ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶಿವಯೋಗಿ ಹೇಳಿದರು.

ಪಟ್ಟಣದ ಪಕ್ಷದ ಕಛೇರಿಯಲ್ಲಿ ತಾಲ್ಲೂಕಿನ ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕಗೊಂಡಿರುವ ಪಿ. ಪ್ರೇಮ್ ಕುಮಾರ್ ಗೌಡ ಅವರಿಗೆ ನೇಮಕಾತಿ ಆದೇಶದ ಪ್ರತಿ ಹಸ್ತಾಂತರಿಸಿದ ಬಳಿಕ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ನಮಗೆ ಪಕ್ಷದ ಹೈಕಮಾಂಡ್ ಆದೇಶವೇ ಅಂತಿಮ. ಪ್ರೇಮ್‌ಕುಮಾರ್ ಅವರನ್ನು ಪಕ್ಷ ನೇಮಕ ಮಾಡಿದ್ದು, ಅವರು ಪಕ್ಷದ ಪರ ಕೆಲಸ ಮಾಡಬೇಕು. ತಾಲ್ಲೂಕಿನ ಎಲ್ಲಾ ಮುಖಂಡರುಗಳ ವಿಶ್ವಾಸ ಗಳಿಸಿ ಗ್ರಾಮ ಪಂಚಾಯ್ತಿ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಿ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನತೆಯ ಮುಂದೆ ತೆರೆದಿಡಬೇಕು ಎಂದು ಕಿವಿಮಾತು ಹೇಳಿದರು.

ಪುರಸಭೆ ಮಾಜಿ ಅಧ್ಯಕ್ಷ ಎಂ. ರಾಜಶೇಖರ ಮಾತನಾಡಿ, ಬಿಜೆಪಿ ಸರ್ಕಾರಕ್ಕೆ ಸಾಮಾಜಿಕ ಕಳಕಳಿ ಇಲ್ಲದ ಎಲ್ಲಾ ಕ್ಷೇತ್ರಗಳನ್ನು ಖಾಸಗೀಕರಣ ಮಾಡುತ್ತಲಿದ್ದು ರೈತರ, ಮಧ್ಯಮ ವರ್ಗದವರ, ಬಡವರ ಬದುಕಿನಲ್ಲಿ ಚೆಲ್ಲಾಟವಾಡುತ್ತಿದೆ. ಹೀಗೆ ಮುಂದುವರೆದರೆ ಖಾಸಗಿ ಕಂಪನಿಗಳೇ ದೇಶವನ್ನಾಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಆತಂಕ ವ್ಯಕ್ತ ಪಡಿಸಿದರು.

ಚಿಗಟೇರಿ ಬ್ಲಾಕ್ ಕಾಂಗ್ರೆಸ್ ನೂತನ ಅಧ್ಯಕ್ಷ ಪಿ. ಪ್ರೇಮ್ ಕುಮಾರ್ ಗೌಡ ಮಾತನಾಡಿ, ಪಕ್ಷ ನನಗೆ ನೀಡಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತೇನೆ. ನಮ್ಮ ತಂದೆ ಕಾಂಗ್ರೆಸ್ ಪಕ್ಷವನ್ನು ಅಪ್ಪಿಕೊಂಡು ಕೆಲಸ ಮಾಡಿದ ಹಾಗೆ ನಾನು ಸಹ ಅವರ ಹಾದಿಯಲ್ಲೇ ಸಾಗಿ ಎಲ್ಲರ ವಿಶ್ವಾಸ ಗಳಿಸಿ ಪಕ್ಷ ಸಂಘಟನೆಯಲ್ಲಿ ತೊಡಗುತ್ತೇನೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ ಹಾಗೂ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಪಿ.ಎಲ್. ಪೋಮ್ಯಾನಾಯ್ಕ್ ಮಾತನಾಡಿ, ಕಾಂಗ್ರೆಸ್ ದಲಿತ ಮತ್ತು ದಮನಿತರ ಪಕ್ಷವಾಗಿದೆ. ಎಲ್ಲಾ ಕೋಮಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹಳ್ಳಿ ಹಳ್ಳಿಗೆ ಸಂಚಾರ ಮಾಡಿ ಪಕ್ಷ ಸಂಘಟನೆ ಮಾಡಬೇಕು ಎಂದು ಪ್ರೇಮ್ ಕುಮಾರ್ ಅವರಿಗೆ ಕಿವಿ ಮಾತು ಹೇಳಿದರು.

ಬಿಜೆಪಿ ಸರ್ಕಾರದ ವೈಫಲ್ಯಗಳನ್ನೊಳಗೊಂಡ ಕೈಪಿಡಿಯನ್ನು ಜಿಲ್ಲಾಧ್ಯಕ್ಷ ಶಿವಯೋಗಿ ಅವರು ಕಾರ್ಯಕರ್ತರಿಗೆ ಹಸ್ತಾಂತರಿಸಿದರು.

ಈ ವೇಳೆ ಕೆಪಿಸಿಸಿ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಪಿ.ಟಿ. ಭರತ್, ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯ ಶಶಿಧರ್ ಪೂಜಾರ್, ಮುಖಂಡರಾದ ಎಂ.ಬಿ. ಯಶವಂತಗೌಡ ನ್ಯಾಯವಾದಿ ಮತ್ತಿಹಳ್ಳಿ ಅಜ್ಜಪ್ಪ, ಟಿಎಪಿಸಿಎಂಎಸ್ ನಿರ್ದೇಶಕರಾದ ತಿಮ್ಮಾನಾಯ್ಕ್, ಗಿಡ್ಡಳ್ಳಿ ನಾಗರಾಜ್, ಲಾಟಿ ಸಲೀಂ, ರಿಯಾಜ್ ಅಹ್ಮದ್, ಕೆ. ಚಂದ್ರಶೇಖರ್, ಸಾಸ್ವಿಹಳ್ಳಿ ನಾಗರಾಜ್, ನಂದಿಬೇವೂರು ಎನ್. ಪ್ರಭು, ಟಿ. ಪ್ರವೀಣ್‌ಕುಮಾರ್, ಎಂ. ಮಾಂತೇಶ್ ನಾಯ್ಕ್, ಶ್ರೀಕಾಂತ್ ಯಾದವ್, ನಗರ ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಎನ್. ಮಜೀದ್, ಚಿಗಟೇರಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ನೂರುದ್ದೀನ್, ಮತ್ತಿಹಳ್ಳಿ ಸೋಮನಾಥ್, ಸಮೀವುಲ್ಲಾ, ಬಸವರಾಜ್ ಭಂಡಾರಿ ಇನ್ನಿತರರು ಉಪಸ್ಥಿತರಿದ್ದರು.

# ಲಂಕೇಶ್ ಬರವಣಿಗೆ ಇಂದಿಗೂ ಜೀವಂತ, ನಿರಂತರ



ಜಗಳೂರಿನಲ್ಲಿ ಇಂದ್ರಜಿತ್ ಲಂಕೇಶ್ ಅಭಿಮತ

ಜಗಳೂರು, ಆ.22- ಲಂಕೇಶ್ ಅವರ ಬರವಣಿಗೆ ಜೀವಂತ ಹಾಗೂ ನಿರಂತರ ಎಂದು ಹಿರಿಯ ಪತ್ರಕರ್ತ ಮಾಧ್ಯಮ ವಿಶ್ಲೇಷಣಕಾರ ಇಂದ್ರಜಿತ್ ಲಂಕೇಶ್ ಹೇಳಿದರು.

ತಾಲ್ಲೂಕಿನ ಸೊಕ್ಕೆ ಗ್ರಾಮದಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಲಂಕೇಶ್ ಅವರು ಭಾಗವಹಿಸಿದ ರೈತ ಚಳುವಳಿ ಕನ್ನಡ ಭಾಷೆಯ ಉಳಿವಿಗಾಗಿ ನಡೆಸಿದ ಹೋರಾಟದ ಬದುಕು, ಪತ್ರಿಕೋದ್ಯಮ ವೃತ್ತಿ, ಅವರ ವ್ಯಕ್ತಿತ್ವವನ್ನು ಸ್ಮರಣೆ ಮಾಡಿಕೊಳ್ಳಬೇಕಿದೆ ಎಂದರು.

ಗೋಕಾಕ್ ಚಳುವಳಿಯಲ್ಲಿ ಡಾ. ರಾಜ್‌ಕುಮಾರ್ ಅವರನ್ನು ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿದರು. ಅವರ ಹೋರಾಟದ ಮಾದರಿಯನ್ನು ನವಲಗುಂದ ಹೋರಾಟದಲ್ಲಿ ಮೆಲುಕು ಹಾಕಬೇಕಿದೆ. ಅವರ ಬರಹಗಳು, ಟೀಕೆ, ಟಿಪ್ಪಣಿ, ತನಿಖಾ ವರದಿಗಳನ್ನು ಉಳಿಸಿಕೊಳ್ಳುವ ಪ್ರಯತ್ನ ನಮ್ಮದಾಗಿದೆ. ಅವರು ಜೀವಂತವಾಗಿಲ್ಲ. ಆದರೆ, ಅವರ ಬರವಣಿಗೆ ಸಾಧನೆ ಅವಿಸ್ಮರಣೀಯ ಎಂದು ಹೇಳಿದರು.


ಜಲಮೂಲಗಳಿಲ್ಲದ ಬರಪೀಡಿತ ತಾಲ್ಲೂಕಿನಲ್ಲಿ ನೀರಾವರಿ ಹೋರಾಟಗಳಿಗೆ ಜನಪ್ರತಿನಿಧಿಗಳು ಸ್ಪಂದಿಸಲಿ ಎಂಬುದು ನನ್ನ ಆಶಯವಾಗಿದೆ ಎಂದರು.

ಸ್ವಾತಿ ತಿಪ್ಪೇಸ್ವಾಮಿ ಅವರಿಗೆ ಅಮೇರಿಕಾದಲ್ಲಿ ಉನ್ನತ ಹುದ್ದೆ ಸಿಕ್ಕಿದ್ದರೂ ಸಹ ಅದನ್ನು ತೊರೆದು ಗ್ರಾಮೀಣ ಭಾಗದಲ್ಲಿ ಸೇವೆಗೈಯ್ಯಲು ಸೊಕ್ಕೆ ಗ್ರಾ.ಪಂ ಅಧ್ಯಕ್ಷರಾಗಿರುವುದು ಯುವಕರು ಅಭವಿಷ್ಯದ ದೃಷ್ಟಿಯಿಂದ ವಿದೇಶಗಳಲ್ಲಿ ಉದ್ಯೋಗ ಹರಸುವ ಆಸೆಗಳಿಗೆ, ಕನಸುಗಳಿಗೆ ಸ್ಫೂರ್ತಿಯಾಗಿದ್ದಾರೆ. ಈ ರೀತಿ ಯುವಕರು ಸಕ್ರಿಯವಾಗಿ ಗ್ರಾಮೀಣ ಮತ್ತು ಜಿಲ್ಲೆಗಳ ಅಭಿವೃದ್ದಿಯಲ್ಲಾಗಲೀ, ರಾಜಕೀಯ ರಂಗದಲ್ಲಾಗಲೀ ಭಾಗವಹಿಸಬೇಕು ಎಂದು ಇಂದ್ರಜಿತ್ ಸಲಹೆ ನೀಡಿದರು.

2018 ರಲ್ಲಿ ರಾಜ್ಯವ್ಯಾಪಿ ಪ್ರಯಾಣ ಮಾಡಿ, ಅಂದಿನ ಸರ್ಕಾರ ರಚನೆಯ ಬಗ್ಗೆ ಸಮೀಕ್ಷೆ ನಡೆಸಿ ವರದಿ ಮಾಡಿದ್ದೆ. ಲಂಕೇಶ್ ಪತ್ರಿಕೆಗೆ 42 ವರ್ಷ ತುಂಬಿದ್ದು, ಇಂದಿಗೂ ಜನಮಾನಸದಲ್ಲಿ ಉಳಿದಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಿಪ್ಪೇಸ್ವಾಮಿ, ಮಾಜಿ ತಾ.ಪಂ. ಸದಸ್ಯ ಸಿದ್ದೇಶ್, ಗ್ರಾ.ಪಂ. ಸದಸ್ಯ ರಾಜು ಮತ್ತಿತರರಿದ್ದರು.

# ಯೋಜನೆಗಳನ್ನು ತಲುಪಿಸಲು ಕರೆ



(1ನೇ ಪುಟದಿಂದ) ಅಧ್ಯಕ್ಷರ ಮನೆಗಳಿಗೆ ನಾಮಫಲಕ ಹಾಕುವುದರ ಜೊತೆಗೆ ಪಕ್ಷದ ಬಾವುಟವನ್ನು ಅವರ ಮನೆಯ ಮೇಲೆ ಹಾರಿಸಿ, ಪಕ್ಷದ ಅಧಿಕಾರವನ್ನು ಹಸ್ತಾಂತರಿಸುವ ಮೂಲಕ ಹೆಚ್ಚಿನ ಅಧಿಕಾರ ನೀಡಲಾಗಿದೆ ಎಂದರು.

ಪ.ಪಂ ಅಧ್ಯಕ್ಷ ಆರ್.ತಿಪ್ಪೇಸ್ವಾಮಿ, ಬಿಜೆಪಿ ಮಂಡಲ ಅಧ್ಯಕ್ಷ ಪಲ್ಲಾಗಟ್ಟೆ ಮಹೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಪ.ಪಂ. ಸದಸ್ಯರಾದ ಜೆ.ಪಾಪಲಿಂಗಪ್ಪ, ನವೀನ್, ರೇವಣ್ಣ, ಜಿಲ್ಲಾ ಉಪಾಧ್ಯಕ್ಷ ಡಿ.ವಿ.ನಾಗಪ್ಪ, ಪಕ್ಷದ ಮುಖಂಡರುಗಳಾದ ಓಬಳೇಶ್, ರಮೇಶ್, ಖಾಸೀಂ, ದಾದಾಪೀರ್ ಸೇರಿದಂತೆ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

## ರಕ್ಷಾ- ಬಂಧನ

ದೇಶದಾದ್ಯಂತ ರಕ್ಷಾ- ಬಂಧನದ ಆಚರಣೆ
ಸಹೋದರ - ಸಹೋದರಿಯರ ಬಾಂಧವ್ಯಕ್ಕೆ ಸಮರ್ಪಣೆ
ಶ್ರಾವಣ ಪೂರ್ಣಿಮೆಯ ಸುಂದರ ಹಬ್ಬ
ಭಾರತೀಯರ ಪಾಲಿಗೆ ಮಹತ್ವದ ಹಬ್ಬ

ಬಾಲ್ಯದ ಅನೇಕ ಸಿಹಿ- ಕಹಿ ನೆನಪು ಗಳ ಸ್ಮರಣೆ
ತಂಗಿ ಯರಿಗೆ ಅಣ್ಣನ "ಭರವಸೆ" ಯ ರಕ್ಷಣೆ
ಶುದ್ಧ -ಪವಿತ್ರ- ನಿರಂತರ ಪ್ರೀತಿಯ ಸಂಕೇತ
ಸಂಬಂಧಗಳ ರಕ್ಷಣೆ ಜೀವನಪರ್ಯಂತ

ವಿವಾಹಿತೆ ಸಹೋದರಿಯ ರಿಂದ
'ರಾಖಿ'ಯ ರವಾನೆ
ಪರಸ್ಪರರಲ್ಲಿ ನಿಸ್ವಾರ್ಥ ಭ್ರಾತೃತ್ವದ ಭಾವನೆ
ಉತ್ತಮ ಸಂಬಂಧ - ಪ್ರಕೃತಿಯ ಕೊಡುಗೆ
ವಾತ್ಸಲ್ಯ ವ್ಯಕ್ತ ಪಡಿಸುವ ರೀತಿ - ಹಲವು ಬಗೆ

ರಾಖಿ ಕಟ್ಟುವ ವೇಳೆ ಸಹೋದರನ ಹಣೆಗೆ ತಿಲಕ
'ನೂಲಹುಣ್ಣಿಮೆ' ನಿರ್ಮಲ - ನಿಸ್ವಾರ್ಥತೆಯ ಪ್ರತೀಕ
ಭಾವನಾತ್ಮಕವಾಗಿ ಸ್ಮರಿಸುವುದು ಈ ದಿನದ ವಿಶೇಷ
ಸಹೋದರನ ಏಳಿಗೆಯಲ್ಲಿ ಸಹೋದರಿಯ ಹರುಷ

ಅಣ್ಣನ ಮುಂಗೈಗೆ ರೇಷ್ಮೆಯ ದಾರ
ಆರತಿ ಬೆಳಗಿ, ದುಷ್ಟ ಶಕ್ತಿಗಳ ಸಂಹಾರ
ಒಡಹುಟ್ಟಿದವನ ದೀರ್ಘಾಯುಷ್ಯ- ಯಶಸ್ಸು -
ಸಹೋದರಿಯ ಪ್ರಾರ್ಥನೆ
ಸದಾ ಬೆನ್ನೆಲುಬಾಗಿ ಸಹೋದರನಿಂದ-
ಸಹೋದರಿಯ ರಕ್ಷಣೆ

- ಡಾ|| ದೀಪ ಶ್ರೀ ಪ್ರಮೋದ್ ಗುಜ್ಜರ್
ಉಪನ್ಯಾಸಕರು, ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ದಾವಣಗೆರೆ.

# ಪರ ಚೀನಾ-ಪಾಕ್

(1ನೇ ಪುಟದಿಂದ) ಬರಾದರ್ ಹೇಳಿದ್ದರೂ ಸಹ, ಅದು ಚೀನಾಗೆ ಹೆಚ್ಚು ಭರವಸೆ ಮೂಡಿಸಿಲ್ಲ.

ಈ ನಡುವೆ, ದಕ್ಷಿಣ ಚೀನಾ ಸಮುದ್ರದ ಮೇಲೆ ಅಮೆರಿಕ ನಿಗಾ ವಹಿಸಿದೆ. ಇದಲ್ಲದೇ ತೈವಾನ್ ವಿಷಯವನ್ನೂ ಅಮೆರಿಕ ಪ್ರಮುಖವಾಗಿ ಬಳಸಲಿದೆ. ಇದು ಚೀನಾದ ರಾಜಕೀಯ ಹಾಗೂ ರಾಯಭಾರಿ ಸಂಪನ್ಮೂಲಗಳನ್ನು ವಿಭಜಿಸಲಿದೆ ಎಂದು ಚೀನಾ ಅಕಾಡೆಮಿ ಆಫ್ ಸೋಷಿಯಲ್ ಸೈನ್ಸಸ್‌ನ ಅಮೆರಿಕ ವಿಷಯ ಪರಿಣಿತ ಕ್ಸಿಯಾಂಗ್ ಹೇಳಿದ್ದಾರೆ.

# ಅಧಿಕಾರಿ ಹಾಜರಾಗಲು ಕೇಂದ್ರ ಸೂಚನೆ

(1ನೇ ಪುಟದಿಂದ) ಕಾರ್ಯ ನಿರ್ವಹಿಸುತ್ತಿವೆ.

ಇದರಿಂದಾಗಿ ಆದಾಯ ತೆರಿಗೆ ಇಲಾಖೆ ರೆಮಿಟೆನ್ಸ್ ಫಾರಂಗಳನ್ನು ನೇರವಾಗಿ ದಾಖಲಿಸುವಂತೆ ತಿಳಿಸಿತ್ತು. ಎಲೆಕ್ಟ್ರಾನಿಕ್ ಮೂಲಕ ಅರ್ಜಿ ದಾಖಲಿಸುವ ದಿನಾಂಕವನ್ನು ವಿಸ್ತರಿಸಲಾಗಿತ್ತು.

ಕಳೆದ ಜೂನ್ 22ರಂದು ಸೀತಾರಾಮನ್ ಅವರು ಪೋರ್ಟಲ್ ತೊಡಕುಗಳ ಕುರಿತು ಇನ್ಫೋಸಿಸ್‌ನ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದರು. ತ್ವರಿತವಾಗಿ ಎಲ್ಲ ವಿಷಗಳನ್ನು ಬಗೆಹರಿಸಬೇಕು ಹಾಗೂ ಸೇವೆ ಸುಧಾರಿಸಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿತ್ತು.

2019ರಲ್ಲಿ ಮುಂದಿನ ಪೀಳಿಗೆ ಪೋರ್ಟಲ್ ರೂಪಿಸುವ ಗುತ್ತಿಗೆಯನ್ನು ಇನ್ಫೋಸಿಸ್‌ಗೆ ನೀಡಲಾಗಿತ್ತು. ರಿಟರ್ನ್‌ಗಳನ್ನು ಒಂದೇ ದಿನದಲ್ಲಿ ಇತ್ಯರ್ಥಪಡಿಸುವ ಗುರಿಯೊಂದಿಗೆ ಹೊಸ ಪೋರ್ಟಲ್ ಆರಂಭಿಸಲಾಗಿತ್ತು. ಇದಕ್ಕಾಗಿ ಸರ್ಕಾರ 164.5 ಕೋಟಿ ರೂ.ಗಳನ್ನು ಪಾವತಿ ಮಾಡಿತ್ತು.

ಪೋರ್ಟಲ್ ತೊಡಕುಗಳ ಕುರಿತು ಟ್ವೀಟ್ ಮಾಡಿರುವ ಇನ್ಫೋಸಿಸ್, ಆದಾಯ ತೆರಿಗೆ ಇಲಾಖೆಯ ಪೋರ್ಟಲ್ ತುರ್ತು ನಿರ್ವಹಣೆಯಲ್ಲಿ ಮುಂದುವರೆದಿದೆ. ಮುಂದಿನ ವಿವರಗಳು ಲಭ್ಯವಾದಾಗ ತಿಳಿಸುತ್ತೇವೆ. ತೊಂದರೆಯಾಗಿ ವಿಷಾದಿಸುತ್ತೇವೆ ಎಂದು ತಿಳಿಸಿದೆ.

ಈ ವಿಷಯದ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹಿರಿಯ ಸಲಹೆಗಾರ ಕಂಚನ್ ಗುಪ್ತ, ಸರ್ಕಾರದ ಯೋಜನೆಯನ್ನು ಇನ್ಫೋಸಿಸ್ ತೊಡಕಿಗೆ ಸಿಲುಕಿಸಿರುವುದು ಎರಡನೇ ಬಾರಿ.

ಮೊದಲು ಜಿಎಸ್‌ಟಿ ಪೋರ್ಟಲ್ ಹಾಗೂ ಈಗ ಆದಾಯ ತೆರಿಗೆ ಪೋರ್ಟಲ್ ಸಮಸ್ಯೆಗೆ ಸಿಲುಕಿದೆ. ಎಲ್1 ಮಾರ್ಗದ ಮೂಲಕ ಇನ್ಫೋಸಿಸ್ ಸರ್ಕಾರಿ ಯೋಜನೆಗಳನ್ನು ಪಡೆಯುತ್ತಿದೆ. ಇನ್ಫೋಸಿಸ್ ಬಳಿ ಸಾಮರ್ಥ್ಯವಿಲ್ಲ ಇಲ್ಲವೇ ಯೋಜನೆ ಪೂರೈಸುವ ಉದ್ದೇಶ ಇಲ್ಲ. ಸತತವಾಗಿ ಎರಡು ವೈಫಲ್ಯಗಳು ಕಾಕತಾಳೀಯವಲ್ಲ ಎಂದಿದ್ದಾರೆ.

ಅತಿ ಕಡಿಮೆ ಬಿಡ್ ಮೂಲ ಟೆಂಡರ್ ಪಡೆಯುವುದಕ್ಕೆ ಎಲ್1 ಎಂದು ಕರೆಯಾಗುತ್ತದೆ.

ಜಿಎಸ್‌ಟಿ ಜಾಲವನ್ನು ಇನ್ಫೋಸಿಸ್ ರೂಪಿಸಿತ್ತು. ಆಗಲೂ ಸಹ ಪೋರ್ಟಲ್ ನಿಧಾನವಾಗಿ ಕಾರ್ಯ ನಿರ್ವಹಿಸುವುದು ಟೀಕೆಗೆ ಕಾರಣವಾಗಿತ್ತು.


# ಆಕ್ಸಿಜನ್ ಪೂರೈಕೆ

(1ನೇ ಪುಟದಿಂದ) ರಾಜಪಕ್ಷೆ ಅವರು ದ್ರವ ಆಕ್ಸಿಜನ್‌ಗಾಗಿ ವೈಯಕ್ತಿಕ ಮನವಿ ಸಲ್ಲಿಸಿದ್ದರು. ನಂತರ ಆಕ್ಸಿಜನ್ ಪೂರೈಕೆ ಮಾಡಲಾಗಿದೆ.

ಪ್ರಸಕ್ತ ಶ್ರೀಲಂಕಾದಲ್ಲಿ ಕೊರೊನಾ ಸೋಂಕು ವೇಗವಾಗಿ ಹರಡುತ್ತಿದೆ. ಇದರಿಂದಾಗಿ ಆಕ್ಸಿಜನ್ ಬೇಡಿಕೆ ಶೇ.30ರಷ್ಟು ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||
ದಾವಣಗೆರೆ ಜಿ|| ತಾ||, ಲಿಂಗದಹಳ್ಳಿ ಗ್ರಾಮದ ವಾಸಿ,
**ಶ್ರೀ ಜಿ.ಯು. ಬಸವರಾಜಪ್ಪ ಮತ್ತು ಸಹೋದರರು ಹಾಗೂ ಮಕ್ಕಳು**
ಮಾಡುವ ವಿಜ್ಞಾಪನೆಗಳು.





ದಿನಾಂಕ 1.8.2021ನೇ ಭಾನುವಾರ ಬೆಳಗಿನ ಜಾವ 3 ಕ್ಕೆ ನಮ್ಮ ಪೂಜ್ಯ ತಂದೆಯವರಾದ
**ಶರಣ ಜಿ. ಉಮಾಪತಿಯಪ್ಪನವರು**
ಹಾಗೂ ದಿನಾಂಕ 15.8.2021ನೇ ಭಾನುವಾರ ಮಧ್ಯಾಹ್ನ 3.40 ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶರಣೆ ಬಸಮ್ಮನವರು**
ಇವರುಗಳು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 23.08.2021ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಲಿಂಗದಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಸೌಭಾಗ್ಯಮ್ಮ, ಶ್ರೀ ಜಿ.ಯು. ಬಸವರಾಜಪ್ಪ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಶ್ರೀಮತಿ ಸಾವಿತ್ರಮ್ಮ, ಶ್ರೀ ಜಿ.ಯು. ಓಂಕಾರಪ್ಪ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಶ್ರೀಮತಿ ನಾಗವೇಣಿ, ಶ್ರೀ ಜಿ.ಯು. ವೇದಮೂರ್ತಿ ಮತ್ತು ಮಕ್ಕಳು, ಅಳಿಯಂದಿರು,
ಶ್ರೀಮತಿ ಈರಮ್ಮ, ದಿ|| ಬಿಸಲೇರಿ ಕರಿಬಸಪ್ಪ ಮತ್ತ ಮಕ್ಕಳು, ಕಾಡಜ್ಜಿ.
ಶ್ರೀಮತಿ ರೇವಮ್ಮ, ದಿ|| ರೇವಣಸಿದ್ದಪ್ಪ ಮತ್ತು ಮಕ್ಕಳು, ಹಳೇಬಾತಿ.
ಗೌಡ್ರ ವಂಶಸ್ಥರು, ಲಿಂಗದಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊ. : 9900583936, 8762550502, 9945357494

## ಎನ್.ಎಸ್. ರಾಜು ಅವರಿಗೆ ಮಾತೃ ವಿಯೋಗ



ದಾವಣಗೆರೆ ನಿಟುವಳ್ಳಿ ಹೊಸ ಬಡಾವಣೆ ವಾಸಿ, ನಲ್ಕುದುರೆ ಎನ್.ಎಸ್. ನಾಗಪ್ಪನವರ ಧರ್ಮಪತ್ನಿ **ಶ್ರೀಮತಿ ಕೊಟ್ರಮ್ಮ** ಅವರು ದಿನಾಂಕ 22.8.2021ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 81 ವರ್ಷ ವಯಸ್ಸಾಗಿತ್ತು. ಪತಿ, ನಾಲ್ವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, 10 ಜನ ಮೊಮ್ಮಕ್ಕಳು, 3 ಜನ ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.8.2021ರ ಭಾನುವಾರ ಸಂಜೆ ಶಾಮನೂರು ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು.

ದುಃಖತಪ್ತರು : ನಲ್ಕುದುರೆ ಎನ್.ಎಸ್. ನಾಗಪ್ಪನವರ ಕುಟುಂಬ ವರ್ಗ
ಮೊ. : 99018 60253


**ಬೇಕಾಗಿದ್ದಾರೆ**
ವಿದ್ಯಾನಗರ ಶ್ರೀ ಆಂಜನೇಯ ದೇವಸ್ಥಾನ ಹತ್ತಿರವಿರುವ ಮನೆಯಲ್ಲಿ ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
ಸಮಯ : 8 am ರಿಂದ 10 am ರ ವರೆಗೆ. ಸಂಪರ್ಕಿಸಿ :
98862 22719, 83100 24421

**ಬೈಕ್ ಬೇಕಾಗಿದೆ**
ಸಿಂಗಲ್ ಹ್ಯಾಂಡ್, ಸುಸ್ಥಿತಿಯಲ್ಲಿರುವ, 5 ರಿಂದ 6 ವರ್ಷ ಓಡಿಸಿರುವ ದ್ವಿಚಕ್ರ ವಾಹನ (ಗೇರ್ ಗಾಡಿ) ಬೇಕಾಗಿದೆ.
ಸಂಪರ್ಕಿಸಿ: 95380-24422

**ವಿದ್ಯಾನಗರ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್ ಮಾರಾಟಕ್ಕಿವೆ**
30x40 , 30x40 West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x40 East, 30x40 East corner, 60x40 corner.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ, 30x50 ಉತ್ತರ. ಎಂ.ಬಿ.ಎ ಕಾಲೇಜು ಹತ್ತಿರ ಎಸ್.ಎಸ್. ಲೇಔಟ್ ನಲ್ಲಿ 30x40 ಪಶ್ಚಿಮ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ.
97421-447315

**ಹೊಸ ಹೊಸ ಮನೆ ಮಾರಾಟಕ್ಕಿವೆ**
30x50 North, ನಾಲ್ಕು ಬೆಡ್ ರೂಂ ಮನೆ ಡೂಪ್ಲೆಕ್ಸ್ ಮನೆ, 40x60 West, ನಾಲ್ಕು ಬೆಡ್‌ರೂಂ ಮನೆ ಡೂಪ್ಲೆಕ್ಸ್ ಮನೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
ದಾವಣಗೆರೆ NH-4 ರಸ್ತೆಗೆ 25 ಎಕರೆ ಜಮೀನು ಕೊಳ್ಳಲು ಬೇಕಾಗಿರುತ್ತದೆ.
74112 50447

**ಮನೆ ಬಾಡಿಗೆಗೆ ಇದೆ**
ಹೈಟೆಕ್ ಹಾಸ್ಪಿಟಲ್ ರಸ್ತೆ, ಹೈಟೆಕ್ ಬಡಾವಣೆಯಲ್ಲಿ 30x50 ಪಶ್ಚಿಮ, ಇಂಡಿಪೆಂಡೆಂಟ್ ಹೌಸ್
ಸ್ವಾಮಿ ಏಜೆಂಟ್, ವಿದ್ಯಾನಗರ.
97421-447315

**ಕಡಿಮೆ ಬೆಲೆಯಲ್ಲಿ**
Sanitizer 5 ltr Can 450 Rs, organic, Natural sanitizer 550 Rs, Trueview oximeter 800 Rs, (2 years Replacement warranty), Vaporizer 150 Rs, Anti fog Face Guard, All Covid-19 Products Available in 70% Discount.
Contact - 97392-46046

**ಬೇಕಾಗಿದ್ದಾರೆ**
Auditor office / Accountant office ನಲ್ಲಿ GST filing ಮಾಡಿದ ಅನುಭವ ಇರುವ Male/Female candidate Full time ಕೆಲಸ ಮಾಡಲು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
80882 10419

**ಬೇಕಾಗಿದ್ದಾರೆ**
ಹರಿಹರ/ದಾವಣಗೆರೆಯಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ರಾತ್ರಿ ಪಾಳೆಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
63641 33480
80502 19547

**ಸೈಟ್‌ಗಳು ಮಾರಾಟಕ್ಕಿವೆ**
ಹದಡಿ ಗ್ರಾಮದಲ್ಲಿ 40x45 ಪೂರ್ವ ಮೇನ್ ರೋಡ್ ಪಕ್ಕ, ಯರಗುಂಟೆಯ ಶಿವಪುರದಲ್ಲಿ ಪಶ್ಚಿಮ ದಿಕ್ಕಿನ 30x50 ಸೈಟ್‌ಗಳು ಮಾರಾಟಕ್ಕಿವೆ.
98448 91803
97433 13938

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**Hombal e-Mart**
ಹೋಟೆಲ್‌ಗಳಿಗೆ ಮಿನಿ ವೆಜಿಟಬಲ್ ಶಾಪ್‌ಗಳಿಗೆ ತರಕಾರಿ ಮಂಡಿ ಬೆಲೆಯಲ್ಲಿಯೇ ತಾಜಾ ತರಕಾರಿಗಳನ್ನು ಡೋರ್ ಸ್ಟೆಪ್‌ಗೆ ಪಡೆಯಲು ಆರ್ಡರ್ ಮಾಡಿ.
87478 97209

**ಡಾಕ್ಟರ್ ಬೇಕಾಗಿದ್ದಾರೆ**
ಶಿಕಾರಿಪುರ ನಗರದ ಕ್ಲಿನಿಕ್‌ನಲ್ಲಿ ಕಾರ್ಯನಿರ್ವಹಿಸಲು ಡೆಂಟಲ್ ಡಾಕ್ಟರ್ (BDS) ಮತ್ತು ಸ್ಟಾಫ್‌ನರ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ + ಇನ್ಸೆಂಟಿವ್
78943 99340
99802 02254

**ಮನೆ ಬಾಡಿಗೆಗೆ/ಲೀಸ್‌ಗೆ**
2 ಬೆಡ್‌ರೂಮ್ ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ
93410 12022

**ವಿದ್ಯಾನಗರ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್ ಮಾರಾಟಕ್ಕಿವೆ**
30x46, 30x46 East ಅಕ್ಕ-ಪಕ್ಕ, 30x50 30x50 West ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**Exchange Offer**
ನಮ್ಮಲ್ಲಿ ಎಲ್ಲಾ ತರಹದ ಸೊಳ್ಳೆ ಮೆಸ್ ಮತ್ತು ಕುಷನ್, ತಡಿ ಫರ್ನಿಚರ್ ಮಾಡುತ್ತೇವೆ ಮತ್ತು ರಿಪೇರಿ ಸಹ ಮಾಡುತ್ತೇವೆ (Echange Offer ಇದೆ)
ಆರ್. ಟಿ. ಓ. ರೋಡ್.
ಪ್ರದೀಪ್
88614 38237

**AVOID MOSQUITOES**
Mosquito Net For Doors & Windowes. Design Boards, ACP, MDF Available.
SRI GOWRI ENTERPRISES
# 7, 4th Cross, Karur Industrial Area. Davangere-6
72049 94628

**ಸೈಟ್ ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ ಸೈಟ್ (ಉತ್ತರ) 30×40,
ದೇವರಾಜ್ ಅರಸು ಬಡಾವಣೆ ಸೈಟ್ (ದಕ್ಷಿಣ) 30×53,
ಶಾಮನೂರು ಶಿವ-ಪಾರ್ವತಿ ಸೈಟ್ (ಪೂರ್ವ) 30×34,
ಶಾಮನೂರು ಆಶೀರ್ವಾದ ಲೇಔಟ್ (ಪೂರ್ವ) 30×55
78996 36597, 99165 25828

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
ಬನ್ನಿಕೋಡು ಷಂಶೀಪುರ ಹತ್ತಿರ
74112 50447

**ಟಿಪ್ಪರ್ ಮಾರಾಟಕ್ಕಿದೆ**
ವಾಹನ : ಭಾರತ್ ಬೆಂಜ್
ಮಾಡೆಲ್ : 1217ಸಿ, ಮೇಕ್ : 2017
ವಾಹನವು ದಾವಣಗೆರೆಯಲ್ಲಿ ಲಭ್ಯವಿರುತ್ತದೆ.
ಆಸಕ್ತರು ಕರೆ ಮಾಡಲು ಮೊಬೈಲ್ ಸಂಖ್ಯೆ:
ಮೊ. : 91085 29389
99807 05864

**ಮನೆ ಪಾಠಕ್ಕೆ ಟೀಚರ್ ಬೇಕಾಗಿದ್ದಾರೆ**
8ನೇ ತರಗತಿ CBSE ವಿದ್ಯಾರ್ಥಿಗೆ ಮನೆ ಪಾಠಕ್ಕೆ English ಮಾತಾಡಲು ಮತ್ತು English Grammer ಬಲ್ಲ ಟೀಚರ್ ಬೇಕಾಗಿದ್ದಾರೆ.
ನಿಂಚನ ಸ್ಕೂಲ್ ಎದುರು, ನಿಟುವಳ್ಳಿ
ಮೊ. : 98444 81661

**VS Paramedical College**
SSLC ಪಾಸ್/PUC ಪಾಸ್/ಫೇಲ್
Course (DHI)
DIPLOMA HEALTH INSPECTOR
ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
9019580600, 8553278258

**ಮನೆ ಬಾಡಿಗೆಗೆ ಇದೆ**
ರೈಲ್ವೆ ಸ್ಟೇಷನ್, ಹಳೇ ಬಸ್ ಸ್ಟ್ಯಾಂಡ್ ಹತ್ತಿರ ಇರುವ 3BHK ಬೋರ್‌ವೆಲ್, ಕಾರ್ಪೊರೇಷನ್ ನೀರಿನ ಸೌಕರ್ಯವುಳ್ಳ ಉತ್ತಮ ಮನೆ (ಮೊದಲನೇ ಮಹಡಿ) ಬಾಡಿಗೆಗೆ ಇದೆ. ವಿಚಾರಿಸಿ
ಮೊ. 94492 50881
83105 13721

**HOUSE FOR RENT**
# 5628/D-23, 2 BHK 2nd Floor, 4th Main, 6th Cross (Left), Near Indoor Nehru Stadium, S.S. Badavane, B Block, House Name SHIVA RATNA,
Room for Rent with attached Bathroom
94489 29509
(Brokers Not Allowed)

**HIRING IN DAVANAGERE**
30 to 40 vacancies available in 5 company's male/ female Smart Salary.
95382 00008
95132 20322

**ಬೇಕಾಗಿದ್ದಾರೆ**
ಶಿಕ್ಷಕಿಯರು ಮತ್ತು ಆಯಾ ಬೇಕಾಗಿದ್ದಾರೆ.
ಒಟ್ಟು ಹುದ್ದೆಗಳು-03
D.Ed/NTC :02
ಆಯಾ (peon): 01
ನಿಸರ್ಗ ಕಾನ್ವೆಂಟ್,
HKR ಸರ್ಕಲ್ ಹತ್ತಿರ, ನಿಟುವಳ್ಳಿ ಬ್ರ್ಯಾಂಚ್, ದಾವಣಗೆರೆ.
89716 32458, 98444 43374, 99862 26454

**House Keeping Cum Office Boy**
ಬೇಕಾಗಿದ್ದಾರೆ.
ದ್ವಿಚಕ್ರ ವಾಹನ ಹೊಂದಿರಬೇಕು.
ಸಂಪರ್ಕಿಸಿ:
80882 10419

**ಮನೆ ಮಾರಾಟಕ್ಕಿದೆ**
ಗಣೇಶ್ ಪೇಟೆಯಲ್ಲಿ 9/1/2×25 ಅಳತೆಯ ವಾಸಕ್ಕೆ ಯೋಗ್ಯವಿರುವ ಮನೆ ಮಾರಾಟಕ್ಕೆ ಇದೆ. ಸಂಪರ್ಕಿಸಿ.
82170 32537

**ಮನೆ ಬಾಡಿಗೆಗಿದೆ**
3 ಬೆಡ್‌ರೂಂ ಹೊಂದಿರುವ ಸುಸಜ್ಜಿತ ಮನೆ ಮೊದಲನೇ ಮಹಡಿ, ಪಾರ್ಕ್ ಎದುರುಗಡೆ, 2ನೇ ಬಸ್ ಸ್ಟಾಪ್, ವಿದ್ಯಾನಗರ, ದಾವಣಗೆರೆಯಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ: 98455 88889

**CRASH COURSE**
For NEET / 2nd PUC
Tuition100% Results with solved notes.
Sinchana Academy
Near Ram and Co Cricle Davangere
90195 80600, 85532 78258

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**SHOP FOR RENT**
Mamas joint Road, 4th main Davangere.
Ground Floor, 2000 sq ft.
2nd Floor, 2000 Sq. ft.
94483 39413, 98445 66415

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ : ಪಿಯುಸಿ ವಯಸ್ಸು 18 ವರ್ಷ ಮೇಲ್ಪಟ್ಟು, ವೇತನ ರೂ.9000 -12,000ವರೆಗೆ ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು. ದ್ವಿಚಕ್ರ ವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿ.ಎಲ್. ಆರ್.ಸಿ ಕಾರ್ಡ್ ಹೊಂದಿರಬೇಕು.
89514 55892, 99023 42040
81500 67146

**ಲೀಸ್ 12 ಲಕ್ಷ/ಬಾಡಿಗೆ 13,000**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**JOBS**
MCS ACADEMY
Training & Placement Cell
98444 92888

**ಶಾಲಾ ವಾಹನ ಮಾರಾಟಕ್ಕಿದೆ**
ಸುಸಜ್ಜಿತವಾಗಿರುವ 29 ಸೀಟುಗಳುಳ್ಳ (Star line) ಶಾಲಾ ಬಸ್ ಮಾರಾಟಕ್ಕಿದೆ. ಆಸಕ್ತರು ಕೂಡಲೇ ಸಂಪರ್ಕಿಸಬಹುದು.
92433 12902

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ತಕ್ಷಣ ಆಯುರ್ವೇದ ಆಸ್ಪತ್ರೆ**
ಡಾ|| ವಿಶ್ವನಾಥ ಬಿ. B.A.M.S.
ಪಾರ್ಶ್ವವಾಯು ಮತ್ತು ಅಸ್ತಮಾ ಆಯುರ್ವೇದ ಚಿಕಿತ್ಸಾ ಕೇಂದ್ರ
ವಾಣಿ ರೈಸ್‌ಮಿಲ್ ಹಿಂಭಾಗ, ತರಳಬಾಳು ಬಡಾವಣೆ, 8ನೇ ಕ್ರಾಸ್, ದಾವಣಗೆರೆ.
ಫೋ. : 80509 00654

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
Waiter, Cleaner, Counter, kitchen supervisor, Captian
ಹೋಟೆಲ್ ಫುಡ್ಡೀಸ್
ತೋಗಟವೀರ ಕಲ್ಯಾಣ ಮಂಟಪ ಹತ್ತಿರ, ದಾವಣಗೆರೆ.
98861 56688

**ಮೊಣಕಾಲು ಮಂಡಿ ನೋವು (ಸಂಧಿವಾತ - ARTHRITIS) ವಿಶೇಷ ಚಿಕಿತ್ಸಾ ಶಿಬಿರ**
ದಿನಾಂಕ: 23.08.2021
ಸಮಯ: ಬೆಳಗ್ಗೆ 11 ರಿಂದ ಮಧ್ಯಾಹ್ನ 3
ತಜ್ಞ ವೈದ್ಯರು: ಡಾ|| ಪ್ರಭುದೇವ ಯರೇಬೈರಾಪುರ ಮಠ M.S. (AY.), F.A.G.E. (Manipal)
ಸ್ಥಳ : ತಪೋವನ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ದೊಡ್ಡಬಾತಿ-577566 ದಾವಣಗೆರೆ-ಹರಿಹರ
95388 89839
95388 89838
94482 16180

# ಕೊರೊನಾ 3ನೇ ಭೀತಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಸವಾಲು ನಮ್ಮ ಮುಂದಿದೆ : ಡಿಡಿಪಿಐ



**ಆನಗೋಡು : ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ**

ಆನಗೋಡು, ಆ.22 - ರಾಷ್ಟ್ರದ ಭವಿಷ್ಯ ಶಾಲಾ-ಕಾಲೇಜುಗಳ ಕೊಠಡಿಗಳಲ್ಲಿ ನಿರ್ಮಾಣವಾಗುತ್ತದೆ ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಪರಮೇಶ್ವರಪ್ಪ ಮಾರ್ಮಿಕವಾಗಿ ತಿಳಿಸಿದರು .

ಆನಗೋಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಳೆದ ವಾರ ಏರ್ಪಡಿಸಿದ್ದ ಕಲಿಕಾ ಸಾಮಗ್ರಿಗಳ ವಿತರಣೆ ಮತ್ತು ಎನ್.ಎಂ.ಎಂ.ಎಸ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ , ಅವರನ್ನು ಪ್ರತಿಭಾವಂತರನ್ನಾಗಿ ಮಾಡುವ ಹೊಣೆ ಶಿಕ್ಷಕರದ್ದು ಎಂದು ಹೇಳಿದರು .

ಕೊರೊನಾ ಮೂರನೇ ಅಲೆಯ ಭೀತಿ ಇರುವ ಈ ಸಂದರ್ಭದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವ ಸವಾಲು ನಮ್ಮ ಮುಂದಿದೆ ಎಂದು ವಿಶ್ಲೇಷಿಸಿದರು.

ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಕೊಟ್ರೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷ ನಸರುಲ್ಲಾ, ಉಪಾಧ್ಯಕ್ಷ ನಾಗರಾಜ್, ಸದಸ್ಯರಾದ ಕರಿಬಸಪ್ಪ, ಸುರೇಶ್, ನೇತ್ರಾವತಿ, ಲಕ್ಷ್ಮಿದೇವಮ್ಮ, ನಿರ್ಮಲ, ನಾಗರತ್ನಮ್ಮ, ಬಸವರಾಜ್ , ಕ್ಷೇತ್ರ ಸಮನ್ವಯಾಧಿಕಾರಿ ಸುರೇಂದ್ರ ನಾಯಕ, ಪಿಡಿಓ ಸುರೇಶ್ ಮತ್ತಿತರರು ಆಗಮಿಸಿದ್ದರು .

ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷೆ ಚಂದ್ರಮ್ಮ ಅವರು ವಹಿಸಿದ್ದರು. ಶಾಲೆ ಮುಖ್ಯೋಪಾಧ್ಯಾಯ ಲೋಕಣ್ಣ ಮಾಗೋಡು ಸ್ವಾಗತಿಸಿದರು.

# ಹರಿಹರ : ಜಲಸಿರಿ ಯೋಜನೆಯಡಿ ಪ್ರಯೋಗಾರ್ಥ 3 ತಿಂಗಳು ಬಿಲ್ ನೀಡಿಕೆ


ಹರಿಹರ, ಆ.22- ನಗರಸಭೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆಯಡಿ 24x7 ನಿರಂತರ ನೀರು ಸರಬರಾಜು ಯೋಜನೆಯಡಿ, ಪ್ರತಿ ಮನೆಗಳಿಗೂ ಮೀಟರ್ ಅಳವಡಿಸಿ, ಮನೆಗಳಿಗೆ ನಳ ಸಂಪರ್ಕ ಜೋಡಣೆ ಮಾಡಿ, ನೀರು ಸರಬರಾಜು ಮಾಡಲು ಪ್ರಾಯೋಗಿಕ ಚಾಲನೆಯ ಕಾಮಗಾರಿಯನ್ನು ಕೈಗೊಂಡಿದ್ದು, ಮನೆಗಳಿಗೆ ನೀರಿನ ಪರಿಮಾಣಾಧಾರಿತ ಡಮ್ಮಿ ಬಿಲ್ಲುಗಳನ್ನು ನೀಡಲಾಗುತ್ತಿದೆ.

ಮೊದಲ ಮೂರು ತಿಂಗಳು ಪರಿಮಾಣಾಧಾರಿತ ಶುಲ್ಕದ ದರಗಳಲ್ಲಿ ಬಿಲ್ ನೀಡಿಕೆ ಕೇವಲ ಪ್ರಯೋಗಾರ್ಥವಾಗಿದ್ದು, ಸ್ಥಿರ ದರಗಳಲ್ಲಿ ಶುಲ್ಕವು ಅನ್ವಯವಾಗುವುದು ಹಾಗೂ ಮೂರು ತಿಂಗಳ ನಂತರ ಪರಿಮಾಣಾಧಾರಿತ ಶುಲ್ಕದ ದರಗಳು ಅನ್ವಯವಾಗುವವು ಎಂದು ನಗರಸಭೆ ಪೌರಾಯುಕ್ತರು ಹಾಗೂ ಅಧ್ಯಕ್ಷರು ತಿಳಿಸಿದ್ದಾರೆ.

Flair
PACKAGED DRINKING WATER
Brand with Machineries For
SALE
Contact Between 12.00 am to 3.00 pm
PRASHANTH INDUSTRIES
# 1/04-05, Davangere-Harihara Road, Doddabathi, Davangere tq/dist : 577 566

ssims SPARSH
CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ
ದಿನಾಂಕ: ಗುರುವಾರ, 26 ಆಗಸ್ಟ್ 2021 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 5ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

# ನಗರದಲ್ಲಿ ಇಂದಿನಿಂದ ರಾಘವೇಂದ್ರ ಶ್ರೀಗಳ ಆರಾಧನೆ



ಕೆ.ಬಿ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಗುರುರಾಯರ 350ನೇ ಆರಾಧನಾ ಮಹೋತ್ಸವ ಜರುಗಲಿದೆ.

ಆರಾಧನಾ ಮಹೋತ್ಸವವನ್ನು ಅತ್ಯಂತ ಸರಳ ರೀತಿಯಲ್ಲಿ ಆಚರಿಸಲು ತೀರ್ಮಾನಿಸಲಾಗಿದ್ದು, ಕಳೆದ ಬಾರಿಯಂತೆ ಈ ಬಾರಿಯೂ ಸಹ ಭಕ್ತಾದಿಗಳಿಗೆ ಕೇವಲ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಯಾವುದೇ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಉಪನ್ಯಾಸ ಇತ್ಯಾದಿ ಕಾರ್ಯಕ್ರಮಗಳು ಹಾಗೂ ತೀರ್ಥಪ್ರಸಾದ ವ್ಯವಸ್ಥೆ ಇರುವುದಿಲ್ಲ. ಮೂರು ದಿನಗಳ ಕಾಲ ನಡೆಯುವ ಪ್ರಮುಖ ಕಾರ್ಯಕ್ರಮಗಳಾದ ಧಾನ್ಯ ಪೂಜೆ, ಪಂಚಾಮೃತ, ಅಭಿಷೇಕ ಮಹಾಮಂಗಳಾರತಿ ಇವುಗಳೆಲ್ಲವನ್ನು ಆನ್‌ಲೈನ್ ಮೂಲಕ ಭಕ್ತಾದಿಗಳು ವೀಕ್ಷಿಸಬಹುದು ಎಂದು ಶ್ರೀಮಠದ ಆಡಳಿತ ಮಂಡಳಿ ತಿಳಿಸಿದೆ.

# ಫುಟ್‌ಬಾಲ್ ತಂಡದ ಮಾಜಿ ಆಟಗಾರ ಹಕೀಮ್ ನಿಧನ

ಬೆಂಗಳೂರು, ಆ. 22- ಭಾರತೀಯ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಹಾಗೂ 1960ರಲ್ಲಿ ನಡೆದ ರೋಮ್ ಒಲಿಂಪಿಕ್ಸ್ ತಂಡದ ಭಾಗವಾಗಿದ್ದ ಸೈಯದ್ ಶಹೀದ್ ಹಕಿಮ್ ಭಾನುವಾರ ಗುಲ್ಬರ್ಗ ಆಸ್ಪತ್ರೆಯಲ್ಲಿ ನಿಧನ ರಾಗಿದ್ದಾರೆ.



ಹಕೀಮ್ ಸಾಬ್ ಎಂದೇ ಹೆಸರಾಗಿದ್ದ ಅವರು, 82ನೇ ವರ್ಷದಲ್ಲಿ ಕೊನೆಯುಸಿರೆಳೆದಿದ್ದಾರೆ. ಇತ್ತೀಚೆಗೆ ಅವರು ಪಾರ್ಶ್ವವಾಯು ಪೀಡಿತರಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಐದು ದಶಕಗಳ ಕಾಲ ಫುಟ್‌ಬಾಲ್ ಕ್ರೀಡೆ ಜೊತೆ ಗುರುತಿಸಿಕೊಂಡಿದ್ದ ಹಕೀಮ್, ಫುಟ್‌ಬಾಲ್ ತಂಡದ ತರಬೇತುದಾರರಾಗಿಯೂ ಕಾರ್ಯ ನಿರ್ವಹಿಸಿದ್ದರು. ಅವರು ದ್ರೋಣಾಚಾರ್ಯ ಪ್ರಶಸ್ತಿ ಪಡೆದಿದ್ದರು.

ಏಷಿಯಾ ಕ್ಲಬ್ ಕಪ್‌ನಲ್ಲಿ ಅವರು ಫಿಫಾ ಅಂತರರಾಷ್ಟ್ರೀಯ ರೆಫರೀ ಸಹ ಆಗಿದ್ದರು. ಅವರು ಧ್ಯಾನ್‌ಚಂದ್ ಪ್ರಶಸ್ತಿಯನ್ನೂ ಪಡೆದಿದ್ದರು.

ಭಾರತೀಯ ವಾಯುಪಡೆಯ ಮಾಜಿ ಸ್ಕ್ವಾಡ್ರನ್ ಲೀಡರ್ ಆಗಿದ್ದ ಅವರು, ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರಾಂತೀಯ ನಿರ್ದೇಶಕರೂ ಆಗಿದ್ದರು. 2017ಕ್ಕೆ ಮುಂಚೆ ಅವರು 17 ವರ್ಷದೊಳಗಿನ ಫಿಫಾ ವಿಶ್ವ ಕಪ್‌ನ ಯೋಜನಾ ನಿರ್ದೇಶಕರೂ ಆಗಿದ್ದರು.

ಆಟದ ದಿನಗಳಲ್ಲಿ ಅವರು ಸೆಂಟ್ರಲ್ ಮಿಡ್‌ಫೀಲ್ಡ್ ಆಗಿದ್ದರು. ಆದರೆ, 1960ರ ರೋಮ್ ಒಲಿಂಪಿಕ್ಸ್‌ನಲ್ಲಿ ತಮಗೆ ಮೈದಾನಕ್ಕಿಳಿಯಲು ಅವಕಾಶ ಸಿಗಲಿಲ್ಲ ಎಂಬ ವಿಷಾದ ಅವರಿಗಿತ್ತು. ಆಸಕ್ತಿಕರ ಅಂಶವೆಂದರೆ ಆಗ ತಂಡದ ಕೋಚ್ ಅವರ ತಂದೆ ಸೈಯದ್ ಅಬ್ದುಲ್ ರಹೀಮ್ ಅವರೇ ಆಗಿದ್ದರು.

ರೋಮ್‌ನಲ್ಲಿ ಅವಕಾಶ ವಂಚಿತರಾಗಿದ್ದ ಅವರು, 1962ರಲ್ಲಿ ಏಷಿಯನ್ ಗೇಮ್ಸ್‌ಗೂ ಆಯ್ಕೆಯಾಗಲಿಲ್ಲ. ಆಗ ತಂಡ ಏಷಿಯಾ ಗೇಮ್ಸ್‌ನಲ್ಲಿ ಬಂಗಾರದ ಪದಕ ಪಡೆದಿತ್ತು.

# ಶಿಕ್ಷಕ ಎಂ.ಎನ್. ರಾಮಲಿಂಗಮೂರ್ತಿಗೆ ಕಾಶೀಪುರದ ವಿದ್ಯಾರ್ಥಿಗಳ ಬೀಳ್ಕೊಡುಗೆ



ದಾವಣಗೆರೆ, ಆ. 23 - ತಾಲ್ಲೂಕಿನ ಕಾಶೀಪುರ ಗ್ರಾಮದ ಪ್ರೌಢಶಾಲೆಯಲ್ಲಿ ನಡೆದ ಸರಳ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಸುಮಾರು 23 ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಎಂ.ಎನ್. ರಾಮಲಿಂಗಮೂರ್ತಿ ಅವರನ್ನು ಶಾಲೆಯ ಹಳೇ ವಿದ್ಯಾರ್ಥಿಗಳು ಹಾಗೂ ಕಾಶೀಪುರ ಗ್ರಾಮಸ್ಥರು ಸನ್ಮಾನಿಸಿದರು.

# ಚಿಕ್ಕ ಬೂದಿಹಾಳ್ ನಲ್ಲಿ ರೇವಣ ಸಾಂಗತ್ಯ ಪುರಾಣ

ದಾವಣಗೆರೆ ತಾಲ್ಲೂಕು ಚಿಕ್ಕಬೂದಿಹಾಳ್ ಗ್ರಾಮದಲ್ಲಿ ಶ್ರಾವಣ ಮಾಸದ ಅಂಗವಾಗಿ ಇಂದಿನಿಂದ ಶ್ರಾವಣ ಕೊನೆಯ ಸೋಮವಾರದವರೆಗೆ ಶ್ರೀ ಗುರು ರೇವಣಸಿದ್ದೇಶ್ವರ ಸ್ವಾಮಿಯ ರೇವಣ ಸಾಂಗತ್ಯ ಪುರಾಣ ಕಾರ್ಯಕ್ರಮ ಆರಂಭವಾಗಿದ್ದು, ಪ್ರತಿದಿನ ರಾತ್ರಿ 9 ರಿಂದ 10 ರವರೆಗೆ ನಡೆಯಲಿದ್ದು, ಶ್ರೀ ಗುರು ರೇವಣಸಿದ್ದೇಶ್ವರ ಸ್ವಾಮಿಯ ಭಜನಾ ಮಂಡಳಿಯವರಿಂದ ಭಜನೆಯೊಂದಿಗೆ ಪುರಾಣ ಕಾರ್ಯಕ್ರಮವು ಪ್ರಾರಂಭವಾಗಿದೆ ಎಂದು ಮಾಜಿ ಗ್ರಾ.ಪಂ. ಸದಸ್ಯ ಐರಣಿ ಚಂದ್ರು ತಿಳಿಸಿದ್ದಾರೆ.

# ಸರ್ಕಾರಿ ಉರ್ದು ಪ್ರೌಢಶಾಲೆ ಮಾದರಿ



**ಮಲೇಬೆನ್ನೂರು**

ಮಲೇಬೆನ್ನೂರು, ಆ.22- ಪಟ್ಟಣದ ಸರ್ಕಾರಿ ಉರ್ದು ಪ್ರೌಢ ಶಾಲೆಗೆ ನಿನ್ನೆ ಭೇಟಿ ನೀಡಿದ ಶಾಸಕ ಎಸ್. ರಾಮಪ್ಪ, ವೃತ್ತಿ ಶಿಕ್ಷಣ ಶಿಕ್ಷಕಿ ಫರೀದಾ ಬೇಗಂ ನೇತೃತ್ವದಲ್ಲಿ ನಿರ್ಮಿಸಿರುವ ವೃತ್ತಿ ಶಿಕ್ಷಣ ಮಾರ್ಗದರ್ಶನ ಸಲಹಾ ಕೇಂದ್ರವನ್ನು ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಲಾ ಆವರಣ ಸ್ವಚ್ಛತೆಯನ್ನು ಶ್ಲಾಘಿಸಿದ ಶಾಸಕರು, ಶಾಲಾ ಕಟ್ಟಡಕ್ಕೆ ಶಿಕ್ಷಕರೇ ತಮ್ಮ ಸಂಬಳದ ಹಣದಲ್ಲಿ ಸುಣ್ಣ-ಬಣ್ಣ ಮಾಡಿಸಿರುವುದಕ್ಕೆ ಅಭಿನಂದನೆ ಸಲ್ಲಿಸಿದರು.

ಶಿಕ್ಷಕರು ಹಾಗೂ ಎಸ್‌ಡಿಎಂಸಿ ಅಧ್ಯಕ್ಷರ ಬೇಡಿಕೆಯಂತೆ ಶಾಲಾ ಕಟ್ಟಡದ ಮೇಲ್ಭಾಗದಲ್ಲಿ ಸಭಾ ಭವನ ನಿರ್ಮಾಣಕ್ಕೆ ಶಾಸಕರ ಅನುದಾನ ನೀಡುವುದಾಗಿ ಮತ್ತು ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಅಭಿವೃದ್ಧಿಗೂ ಗಮನ ಹರಿಸುವುದಾಗಿ ರಾಮಪ್ಪ ಭರವಸೆ ನೀಡಿದರು.

ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್, ಎಸ್‌ಡಿಎಂಸಿ ಅಧ್ಯಕ್ಷ ಸೈಯದ್ ಸಾಬೀರ್ ಅಲಿ, ಮುಖ್ಯ ಶಿಕ್ಷಕ ರಾಜೇಶ್ವರಿ, ಹಿರಿಯ ಶಿಕ್ಷಕ ಹಾಗೂ ತಾಲ್ಲೂಕು ಕಸಾಪ ಅಧ್ಯಕ್ಷ ರೇವಣ ಸಿದ್ದಪ್ಪ ಅಂಗಡಿ, ಸರ್ಕಾರಿ ಪದವಿ ಪೂರ್ವ ಕಾಲೇಜು ಉಪಾಧ್ಯಕ್ಷ ಮೀರ್ ಆಜಾಂ, ಭತ್ತದ ವ್ಯಾಪಾರಿ ನಯಾಜ್, ಕೆ.ಪಿ. ಗಂಗಾಧರ್, ಪಿ.ಎಸ್. ನಿಜಲಿಂಗಪ್ಪ, ಪಿ.ಆರ್. ಕುಮಾರ್ ಯೂನೂಸ್, ಪಿ.ಹೆಚ್. ಶಿವು, ಪೂಜಾರ್ ದೇವರಾಜ್ ಇನ್ನಿತರರು ಈ ವೇಳೆ ಹಾಜರಿದ್ದರು.

# ಆಫ್ಘಾನಿಸ್ತಾನದಿಂದ ಕರ್ನಾಟಕದ ಏಳು ಜನ ವಾಪಸ್

ಬೆಂಗಳೂರು, ಆ. 22 – ಆಫ್ಘಾನಿಸ್ತಾನದಿಂದ ಭಾನುವಾರ ಸುರಕ್ಷಿತವಾಗಿ ಬಂದಿರುವವರಲ್ಲಿ ಏಳು ಜನ ಕರ್ನಾಟಕದವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐವರು ಮಂಗಳೂರು ಹಾಗೂ ತಲಾ ಒಬ್ಬರು ಬಳ್ಳಾರಿ ಹಾಗೂ ಬೆಂಗಳೂರಿನವರು. ಇನ್ನೂ ಇಬ್ಬರು ಕಾಬುಲ್ ವಿಮಾನ ನಿಲ್ದಾಣದಲ್ಲಿ ಅತಂತ್ರರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

HEARTLY CONGRATULATIONS

Dr. ANIL NELIVIGI
Consultant Orthopaedic Surgeon, Davanagere.

Dr. RAGHUKUMAR J.
Professor of Orthopaedics, J.J.M.M.C, Davanagere.
Heartly Congratulations to
Dr. Anil S. Nelivigi
for Electing as President and
Dr. Raghukumar J.
for Electing as Secretary Unanimously
for Davanagere
Orthopaedic Society (DOS)
Friends and Well Wishers

ದ್ವಿತೀಯ ವರ್ಷದ ಪುಣ್ಯಸ್ಮರಣೆ
ದಿ|| ಯಲ್ಲಪ್ಪ ಎಸ್.ವೈ.
ನಿವೃತ್ತ ಡಿ.ವೈಎಸ್.ಪಿ. ಮಡಿಕೆರೆ,
ಚನ್ನಗಿರಿ ತಾ||, ದಾವಣಗೆರೆ ಜಿಲ್ಲೆ.

ನೀವು ನಮ್ಮನ್ನಗಲಿ ದಿನಾಂಕ : 23.08.2021ಕ್ಕೆ
ಎರಡು ವರ್ಷವಾಯಿತು
ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು,
ನಿಮ್ಮ ಸ್ಮರಣೆಯಲ್ಲಿರುವ,
ಇಂತಿ ದುಃಖತಪ್ತ ಬಂಧುಗಳು...
ಶ್ರೀಮತಿ ಪುಟ್ಟಮ್ಮ ಕೋಂ. ಲೇಟ್ ಯಲ್ಲಪ್ಪ
ಮೃತರ ಮಕ್ಕಳು, ಅಳಿಯಂದಿರು,
ಮೊಮ್ಮಕ್ಕಳು ಹಾಗೂ ಅಪಾರ
ಬಂಧು ವರ್ಗದವರು ಹಾಗೂ ಸನ್ಮಿತ್ರರು.

Srishyla Educational Trust (R), Bheemasamudra
GM INSTITUTE OF PHARMACEUTICAL SCIENCES AND RESEARCH
(Approved by A.I.C.T.E. New Delhi & P.C.I. New Delhi)
GM Campus, P.B.Raod, DAVANAGERE - 577 006
Website: www.gmipsr.com

ADMISSIONS OPEN FOR
B.Pharm (Four Year Degree Course) | D.Pharm (Two Year Diploma Course) | B.Pharm (Lateral Entry for D.Pharm Students)

B.Pharm
- Drugs Inspector
- KAPL-Govt Pharm Industry
- Lecturer at D.Pharm College
- Drug Testing Laboratories
- Product Management Team (PMT)
- Junior Scientific Officer
- Clinical Trail Executive
- Medical Transcription
- All Jobs of D.Pharm
MOST DEMANDED COURSES
D.Pharm
- Pharmacist of Medical Shop
- Wholsale Pharma Business
- Pharmaceutical Marketing
- Lab Technician at Pharmacy Colleges
- Repacking Units
- Cosmetic Industries
- QC Supervisors at Food Processing Industries
Eligibility for Admission
D.Pharm: Candidates Passed in PUC/10+2 with Physics, Chemistry, Biology of Maths
B.Pharm: Candidates Passed in PUC/10+2 with Minimum 50% Marks in any Combination
Contact: 63642 59994, 99014 99119

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte